# ರೇಷ್ಮೆ ಇಲಾಖೆಯ ಪ್ರಮುಖ ಯೋಜನೆಗಳ ಸೌಲಭ್ಯಗಳ ವಿವರ
# 2014–15

## 2014–15ನೇ ಸಾಲಿನಲ್ಲಿ ಅನುಷ್ಠಾನ ಮಾಡುವ ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆ

### 1. ಹಿಪ್ಪುನೇರಳೆ ನಾಟಿ ಮಾಡುವ ರೇಷ್ಮೆ ಕೃಷಿಕರಿಗೆ ಸಹಾಯಧನ

ಯಶಸ್ವಿ ಗೂಡು ಉತ್ಪಾದನೆಗೆ ಹಿಪ್ಪುನೇರಳೆ ಗುಣಮಟ್ಟ ಮುಖ್ಯವಾದ ಅಂಶ. ಈ ನಿಟ್ಟಿನಲ್ಲಿ ಹಿಪ್ಪುನೇರಳೆ ತೋಟ ನಿರ್ವಹಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ನೀರಾವರಿ ಸೌಲಭ್ಯವಿರುವ ರೈತರನ್ನು / ಕೃಷಿಕರನ್ನು ಆಯ್ಕೆ ಮಾಡಿ ಹಿಪ್ಪುನೇರಳೆ ನಾಟಿ ಮಾಡುವ ತೋಟ ವಿಸ್ತರಿಸುವ / ಸಾಂಪ್ರದಾಯಿಕ ಹಿಪ್ಪುನೇರಳೆ ತಳಿ ತೆಗೆದು ಹೆಚ್ಚಿನ ಇಳುವರಿ ನೀಡುವ ಹೊಸ ತಳಿಗೆ ಬದಲಾಯಿಸುವ ರೇಷ್ಮೆ ಕೃಷಿಕರಿಗೆ ಸಹಾಯಧನ ಒದಗಿಸಲಾಗುವುದು. ಒಂದು ಎಕರೆ ಹಿಪ್ಪುನೇರಳೆ ನಾಟಿಗೆ ರೂ.14,000/– ಘಟಕ ದರ ನಿಗದಿಪಡಿಸಿದ್ದು ಇದರಲ್ಲಿ ಶೇ.75 ರಷ್ಟು ಸಹಾಯಧನ (ರೂ.10,500/–) ನೀಡಲಾಗುವುದು. ಸಹಾಯಧನವನ್ನು ಕೇಂದ್ರ ರೇಷ್ಮೆ ಮಂಡಳಿ ಮತ್ತು ರಾಜ್ಯ ಶೇ.50:25ರ ಅನುಪಾತದಲ್ಲಿ ಭರಿಸುತ್ತದೆ. ಒಬ್ಬ ಫಲಾನುಭವಿ ಗರಿಷ್ಠ 2ಹೆಕ್ಟೇರ್ ವರೆಗೆ ಪಡೆಯಲು ಅವಕಾಶವಿರುತ್ತದೆ.

| ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ (ರೂ.ಲಕ್ಷಗಳಲ್ಲಿ) | | |
|---|---|---|---|
| | General 75% | SDP/HKRDP 80% | SCSP/TSP 90% |
| 0.14 | 0.105 | 0.112 | 0.126 |

### 2. ನೀರಾವರಿ, ನೀರು ಸಂರಕ್ಷಣೆ ಹಾಗೂ ನೀರು ಬಳಕೆಯ ತಂತ್ರಜ್ಞಾನ ಅಳವಡಿಕೆಗೆ ಸಹಾಯಧನ

ಭೂ ಜಲ ಬತ್ತಿ ಬರ ಪೀಡಿತ ಪ್ರದೇಶವಾಗಿರುವ ವಿಶೇಷವಾಗಿ ಸಾಂಪ್ರದಾಯಿಕ ಪ್ರದೇಶಗಳಲ್ಲಿ ರೇಷ್ಮೆ ಬೆಳೆಗಾರರು ನೀರಾವರಿ ಸೌಕರ್ಯದಿಂದ ವಂಚಿತರಾಗಿ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಹಿಪ್ಪುನೇರಳೆಗೆ ನೀರಾವರಿ ಅವಶ್ಯಕವಾಗಿದ್ದು, ನೀರಿನ ನಿರ್ವಹಣೆ ಗರಿಷ್ಠ ಮಟ್ಟಕ್ಕೆ ನೀರನ್ನು ಸಂರಕ್ಷಿಸಿ ಹಾಗೂ ನೀರಿನ ಪರಿಣಾಮಕಾರಿ ಬಳಕೆ ಮಾಡಿಕೊಳ್ಳುವುದು ಅತ್ಯವಶ್ಯಕವಾಗಿದೆ. ಎಲ್ಲಾ ತೆರನಾದ ನೀರಾವರಿ ಪದ್ಧತಿಗಳನ್ನು ಒಳಗೊಂಡಂತೆ ಹನಿ ನೀರಾವರಿ / ಕೊಳವೆ ಬಾವಿ / ತೆರದ ಬಾವಿ/ ಕೃಷಿ ಹೊಂಡ / ನೀರಿನ ಶೇಖರಣಾ ತೊಟ್ಟಿ ಹಾಗೂ ಅಂತಹ ನೀರು ಕೊಯ್ಲು ವ್ಯವಸ್ಥೆಗಳಿಗೆ ಈ ಕಾರ್ಯಕ್ರಮದಡಿ ಸೌಲಭ್ಯ ಒದಗಿಸಬಹುದಾಗಿದೆ. ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಒಂದು ಹೆಕ್ಟೇರ್ ಹಿಪ್ಪುನೇರಳೆ ತೋಟಕ್ಕೆ ನೀರಾವರಿ ಅಳವಡಿಸಲು NMMI ಘಟಕದರ ರೂ.97,598ಗಳನ್ನು ನಿಗದಿಪಡಿಸಿದ್ದು ಇದರಲ್ಲಿ ಶೇ.90ರಷ್ಟು ಅಂದರೆ ರೂ.87,838/–ಗಳ ಸಹಾಯಧನ ಪಡೆಯಲು ಅವಕಾಶವಿದೆ. ಸಹಾಯಧನದ ಮೊತ್ತದಲ್ಲಿ ಕೇಂದ್ರ ರೇಷ್ಮೆ ಮಂಡಳಿಯು ರೂ.37,500 ಮತ್ತು ಇಲಾಖೆಯು ರೂ.50,338/–ಗಳನ್ನು ಭರಿಸುತ್ತದೆ. ಉಳಿಕೆ ರೂ.9,760/– ಫಲಾನುಭವಿ ಭರಿಸಬೇಕಾಗುತ್ತದೆ.

### 3. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ

ಕಟ್ಟಡ ನಿರ್ಮಾಣ ವೆಚ್ಚ ಹೆಚ್ಚಿರುವುದನ್ನು ಗಣನೆಗೆ ತೆಗೆದುಕೊಂಡು 225 (ಕಡಿಮೆ ವೆಚ್ಚ), 225, 600 ಮತ್ತು 1,000 ಚದರಡಿಗಳ ನಾಲ್ಕು ಪ್ರಕಾರಗಳ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಲ್ಲಿ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣದ ಘಟಕದರಗಳನ್ನು ಮತ್ತು ಸಹಾಯಧನದ ಮೊತ್ತ ಹಾಗೂ ಇರಬೇಕಾದ ಹಿಪ್ಪುನೇರಳೆ ವಿಸ್ತೀರ್ಣದ ವಿವರಗಳನ್ನು ಈ ಕೆಳಗೆ ನೀಡಿದೆ.

**ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಹುಳು ಸಾಕುವ ಮನೆ ಪರಿಗಣಿಸಲು ಪರಿಮಿತಿಗಳು (ನಿಯತಾಂಕಗಳು)**

| ಮನೆಯ ಅಳತೆ (ಚದರಡಿ) | ಘಟಕದರ | ವಿವರ | ಕನಿಷ್ಠ ಇರಬೇಕಾದ | | ಸಹಾಯಧನ | | |
|---|---|---|---|---|---|---|---|
| | | | ಹಿಪ್ಪುನೇರಳೆ ಕ್ಷೇತ್ರ (ಎಕರೆಗಳಲ್ಲಿ) | ಸಾಕುವ ಮೊಟ್ಟೆಗಳು (ಪ್ರತಿ ತಂಡ ದಲ್ಲಿ) | General | SDP/HKRDP | SCSP/TSP |
| 225 | 30,000 | ಕಡಿಮೆ ವೆಚ್ಚದ ಹುಳು ಸಾಕಾಣಿಕೆ ಮನೆ ನಿರ್ಮಾಣ | 0.20 | 50 | 21,000 70% | 22,500 75% | 27,000 90% |
| 225 | 90,000 | ಹುಳು ಸಾಕಾಣಿಕೆ ಮನೆ ನಿರ್ಮಾಣ | 0.20 | 50 | 63,000 70% | 67,500 75% | 81,000 90% |
| 600 | 1,75,000 | ಹುಳು ಸಾಕಾಣಿಕೆ ಮನೆ ನಿರ್ಮಾಣ | 1.00 | 150 | 87,500 50% | 96,250 55% | 1,57,500 90% |
| 1,000 | 2,75,000 | ಹುಳು ಸಾಕಾಣಿಕೆ ಮನೆ ನಿರ್ಮಾಣ | 1.20 | 250 | 82,500 30% | 96,250 35% | 2,47,500 90% |

**4. ರೇಷ್ಮೆ ಹುಳು ಸಾಕಾಣಿಕೆ (ಸುಧಾರಿತ ಮೌಂಟೇಜಸ್‌ಗಳು ಸೇರಿದಂತೆ) ಸಲಕರಣೆಗಳ / ಹಿಪ್ಪುನೇರಳೆ ತೋಟ ನಿರ್ವಹಣಾ ಸಲಕರಣೆಗಳ ಖರೀದಿಗೆ ಸಹಾಯಧನ:**

ಈ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ರೇಷ್ಮೆ ಬೆಳೆಗಾರರಿಗೆ ಸೌಲಭ್ಯ ಒದಗಿಸುವ ಹಿತದೃಷ್ಟಿಯಿಂದ ಸಲಕರಣೆ ಖರೀದಿಗೆ ಒಬ್ಬ ಫಲಾನುಭವಿಗೆ ಒಂದು ವರ್ಷಕ್ಕೆ ಗರಿಷ್ಠ ರೂ.20,000ಗಳ ಮಿತಿಗೆ ಒಳಪಟ್ಟು ಸಹಾಯಧನ ಪಡೆಯಲು ಅವಕಾಶವಿರುತ್ತದೆ. ಹೊಸ ರೈತರಾದಲ್ಲಿ ರೂ.30,000/–ಗಳ ವರೆಗೆ ಸೌಲಭ್ಯ ಒದಗಿಸಬಹುದು.

| ಸಹಾಯಧನ (ರೂ.ಲಕ್ಷಗಳಲ್ಲಿ) | | |
|---|---|---|
| General | SDP/HKRDP | SCSP/TSP |
| 0.20 | 0.20 | 0.20 |

**5. ರೇಷ್ಮೆ ಬೆಳೆ ಸಂರಕ್ಷಣಾ ಪದ್ಧತಿ ಹಾಗೂ ಗುಣಾತ್ಮಕ ಸೋಂಕು ನಿವಾರಕಗಳ ಸರಬರಾಜಿಗೆ ಸಹಾಯ**

ಈ ಕಾರ್ಯಕ್ರಮದಡಿ ರೇಷ್ಮೆ ಬೆಳೆ / ಹುಳುಗಳು ಬ್ಯಾಕ್ಟೀರಿಯ/ವೈರಸ್/ಶಿಲೀಂಧ್ರ/ಪ್ರೊಟೋಜೋವಗಳಿಂದ ರೋಗಗಳು ಬಂದು ಬೆಳೆ ನಾಶವಾಗುವ ಸಾಧ್ಯತೆಯಿದ್ದು, ರೋಗ ನಿವಾರಣಾ ಪದ್ಧತಿಗಳು ಹೆಚ್ಚು ವೆಚ್ಚದಾಯಕವಾಗಿರುವ ಕಾರಣ ಬೆಳೆಗಾರರ, ಬೆಳೆಗೆ ರೋಗ ಬರದಂತೆ ಸಂರಕ್ಷಣಾ ಕ್ರಮ ಪರಿಣಾಮಕಾರಿಯಾಗಿ ಕೈಗೊಳ್ಳಲು ಸೋಂಕು ನಿವಾರಕಗಳ ಬಳಕೆ ವೈಜ್ಞಾನಿಕವಾಗಿ ಅಗತ್ಯವಿದೆ. ಆಗ ಮಾತ್ರ ಯಶಸ್ವಿ ಬೆಳೆ ಸಾಧ್ಯ. ಉತ್ತಮ ಗುಣಮಟ್ಟದ ಸೋಂಕು ನಿವಾರಕಗಳನ್ನು(ಉತ್ತಮ ಪ್ಯಾಕೆಟ್‌ಗಳಲ್ಲಿ) ಒದಗಿಸಿದಲ್ಲಿ / ಬಳಸಿದಲ್ಲಿ ಮಾತ್ರ ಪರಿಣಾಮಕಾರಿ ಸೋಂಕು ನಿವಾರಣೆ ಮಾಡಲು ಸಾಧ್ಯವಾಗುವುದು. ಘಟಕ ವೆಚ್ಚ ರೂ.5000/–ಗಳಿದ್ದು, ಕೇಂದ್ರ, ರಾಜ್ಯ ಹಾಗೂ ಫಲಾನುಭವಿ ಕ್ರಮವಾಗಿ ಶೇ.50:25:25 ರಂತೆ ಭರಿಸಬೇಕಾಗುವುದು.

**6 ಚಾಕಿ ತೋಟ ನಿರ್ವಹಣೆ, ಚಾಕಿ ಹುಳು ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಾಕಾಣಿಕೆ ಸಲಕರಣೆ ಖರೀದಿಗೆ ಸಹಾಯಧನ**

ರೇಷ್ಮೆ ಬೆಳೆ, ಯಶಸ್ಸು ಚಾಕಿ ಹುಳು ಸಾಕಾಣಿಕೆ ನಿರ್ವಹಣೆಯನ್ನು ಆಧರಿಸಿದೆ. ಅಸಮರ್ಪಕ ಚಾಕಿ ನಿರ್ವಹಣೆ ಬೆಳೆ ನಾಶಕ್ಕೆ ದಾರಿಯಾಗುವುದೆಂಬ ಕಾರಣಕ್ಕೆ 11ನೇ ಸಿ.ಡಿ.ಪಿ.ಯಲ್ಲಿದ್ದ ಈ ಕಾರ್ಯಕ್ರಮ 12ನೇ ಸಿ.ಡಿ.ಪಿ.ಯಲ್ಲಿ ಮುಂದುವರೆಸಿದೆ. ರೇಷ್ಮೆ ಬೆಳೆಗಾರರಿಗೆ ವೈಯಕ್ತಿಕವಾಗಿ ಇಲ್ಲವೇ ಸರ್ಕಾರೇತರ ಸಂಸ್ಥೆಗಳು (NGO) / ಸ್ವ

ಸಹಾಯ ಗುಂಪುಗಳು(SHG) ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳು (CBO) ಗಳಿಗೂ ಸ್ವಂತ ಅಥವಾ ಗುತ್ತಿಗೆ ಆಧಾರದ (ಕನಿಷ್ಠ 5 ವರ್ಷಗಳವರೆಗೆ) ಭೂಮಿಯಲ್ಲಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಲು ಅವಕಾಶ ಕಲ್ಪಿಸಿದೆ. ಇದರ ಘಟಕ ದರ ರೂ.6.00 ಲಕ್ಷ. ಸಹಾಯಧನದ ವಿವರ ಕೆಳಕಂಡಂತಿದೆ.

| ಘಟಕದರ | ಸಹಾಯಧನ (ರೂ.ಗಳಲ್ಲಿ) | | |
|---|---|---|---|
| | General-70% | SDP/HKRDP-75% | SCSP/TSP-90% |
| 6,00,000 | 4,20,000 | 4,50,000 | 5,40,000 |

## 7. ಜೈವಿಕ ಗೊಬ್ಬರ ಉತ್ಪಾದನಾ ಘಟಕ

ಸಂಶೋಧನಾ ಸಂಸ್ಥೆಗಳು ಅಭಿವೃದ್ಧಿಪಡಿಸಿದ ರೇಷ್ಮೆ ಕೃಷಿಯಲ್ಲಿ ಮಣ್ಣಿನ ಫಲವತ್ತತೆ ಹೆಚ್ಚಿಸುವ ಅಥವಾ ರೋಗ ತಡೆಗಟ್ಟುವ ಅಥವಾ ಜೈವಿಕ ಕೀಟನಾಶಕಗಳು ಅಥವಾ ಜೈವಿಕ ನಿಯಂತ್ರಣ ಸಸ್ಯ / ಪ್ರಾಣಿ ಜನ್ಯ ಉತ್ಪನ್ನಗಳನ್ನು ಬೃಹತ್ ಪ್ರಮಾಣದಲ್ಲಿ ಲಾಭಕ್ಕಾಗಿ ಉತ್ಪಾದಿಸಲು ಸ್ವಂತ ಜಮೀನಿನಲ್ಲಿ ಸ್ಥಾಪಿಸಲಾಗುವ ಘಟಕಗಳಿಗೆ ಸಹಾಯಧನ ನೀಡಬಹುದಾಗಿದೆ. ಘಟಕ ಸ್ಥಾಪಿಸುವವರೆಗೆ ಕೇಂದ್ರ ರೇಷ್ಮೆ ಮಂಡಳಿ / ಸಂಶೋಧನಾ ಸಂಸ್ಥೆಗಳು ತರಬೇತಿ ನೀಡುತ್ತವೆ. ಫಲಾನುಭವಿಗಳು – ಪದವಿ / ಸ್ನಾತಕೋತ್ತರ ಪದವಿ ಹೊಂದಿರಬೇಕು. ಮೂಲಭೂತ ಸೌಕರ್ಯಗಳಾದ ಜಮೀನು, ಕಟ್ಟಡ ಹೊಂದಿರಬೇಕು. ಯೋಜನಾ ವರದಿ ಸಿದ್ಧಪಡಿಸಿ, ಮಂಡಿಸಿ ಅನುಮೋಧನೆಯಾದ ನಂತರ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡುವುದು. ಈ ಸೌಕರ್ಯ ಪಡೆಯುವ ಫಲಾನುಭವಿಗಳು ತಾಂತ್ರಿಕತೆಯನ್ನು ಅಭಿವೃದ್ಧಿಪಡಿಸಿದ ವಿಜ್ಞಾನಿ / ಸಂಶೋಧನಾ ಸಂಸ್ಥೆಗಳಿಗೆ ಗೌರವಧನ ನೀಡಬೇಕಾಗುತ್ತದೆ.

**ಘಟಕ ದರ ರೂ.1.40 ಲಕ್ಷಗಳು ಸಹಾಯಧನ ರೂ.1.05 ಲಕ್ಷಗಳು**

## 8. ಡೋರ್ ಟು ಡೋರ್ ಸೋಂಕು ನಿವಾರಣಾ ಸೇವೆ / ಗೊಬ್ಬರ, ಇತ್ಯಾದಿ ಒದಗಿಸುವ – ಏಜೆಂಟ್ಸ್

ಸ್ಥಳೀಯ ಪಂಚಾಯತ್/ಸರ್ಕಾರೇತರ ಸಂಸ್ಥೆಗಳು/ಸ್ವ ಸಹಾಯ ಗುಂಪುಗಳು / ಸಮುದಾಯ ಆಧಾರಿತ ಸಂಸ್ಥೆಗಳಿಂದ ಗುರುತಿಸಲ್ಪಟ್ಟ ಆಸಕ್ತ ನಿರೋದ್ಯೋಗಿ/ ಉದ್ಯಮಿಗಳು ರೇಷ್ಮೆ ಬೆಳೆಗಾರರ ಮನೆ ಬಾಗಿಲಿಗೆ ಬಂದು ಸೋಂಕು ನಿವಾರಣೆ ಹಾಗೂ ರೇಷ್ಮೆ ಕೃಷಿಗೆ ಅಗತ್ಯ ವಸ್ತುಗಳನ್ನು ಒದಗಿಸಲು ಮುಂದಾದಲ್ಲಿ, ಅವರಿಗೆ ಒಂದು ಮೋಟಾರ್ ಸೈಕಲ್ (ದ್ವಿ/ತ್ರಿ ಚಕ್ರ ವಾಹನ) ಹಾಗೂ ಪವರ್ ಸ್ಪ್ರೇಯರ್, ಇತ್ಯಾದಿ ಒದಗಿಸಿ ಸೋಂಕು ನಿವಾರಣೆ ಕೈಗೊಳ್ಳಲು ಸಹಾಯ ನೀಡಲಾಗುವುದು. ಇಂತಹ ಏಜೆಂಟರುಗಳು ಮಾಡುವ ಸೋಂಕು ನಿವಾರಣೆಗೆ ತಗಲುವ ವೆಚ್ಚವನ್ನು ರೇಷ್ಮೆ ಬೆಳೆಗಾರರಿಂದ ಪಡೆಯಬಹುದು. ಇದರೊಂದಿಗೆ ರೇಷ್ಮೆ ಬೆಳೆಗಾರರಿಗೆ ಅಗತ್ಯವಾಗಿ ಬೇಕಾಗುವ ಗೊಬ್ಬರ/ರಾಸಾಯನಿಕಗಳು/ಸೋಂಕು ನಿವಾರಕಗಳನ್ನು ಮಾರಾಟ ಸಹ ಮಾಡಬಹುದಾಗಿದೆ. ಇವರಿಗೆ ನಿಗದಿಪಡಿಸಿದ ವ್ಯಾಪ್ತಿ, ಚಾಕಿ ಸಾಕಾಣಿಕಾ ಕೇಂದ್ರದ ಪರಿಮಿತಿಯಲ್ಲಿ ಇರಬೇಕು.

**ಘಟಕ ದರ ರೂ.1.183 ಲಕ್ಷಗಳು ಸಹಾಯಧನ ರೂ.0.88725 ಲಕ್ಷಗಳು**

## 9. ಸೆರಿ ಪಾಲಿ ಕ್ಲಿನಿಕ್ ಸ್ಥಾಪನೆ

ಕೃಷಿ ಇಲಾಖೆಯಲ್ಲಿರುವಂತೆ ಜ್ಞಾನ ಕೇಂದ್ರಗಳನ್ನು ರೇಷ್ಮೆ ಇಲಾಖೆಯಲ್ಲಿ ಸ್ಥಾಪಿಸಿ ರೇಷ್ಮೆ ಬೆಳೆಗಾರರಿಗೆ ಬೇಕಾಗಿರುವ ತಾಂತ್ರಿಕ ಜ್ಞಾನ(consultancy and inputs), ಮಾಹಿತಿ/ಸಲಹೆ ನೀಡಲು, ಪರಿಹಾರೋಪಾಯಗಳನ್ನು ದೊರಕಿಸಲು ಉದ್ದೇಶಿಸಿದೆ. ರೇಷ್ಮೆ ಕೃಷಿಯಲ್ಲಿ ಪದವಿ/ಡಿಪ್ಲೊಮೋ ಪಡೆದವರನ್ನು ಪಾರದರ್ಶಕ ನೀತಿಯಂತೆ ಆಯ್ಕೆ ಮಾಡುವುದು. ಇಂತಹ ಫಲಾನುಭವಿಗಳಿಗೆ ಸಂಶೋಧನಾ ಕೇಂದ್ರ /

ಪ್ರಯೋಗಾಲಯಗಳಲ್ಲಿ / ಮಣ್ಣು ಪರೀಕ್ಷಾ ಕೇಂದ್ರಗಳಲ್ಲಿ ತರಬೇತಿ ನೀಡಲಾಗುವುದು. ಈ ಘಟಕಗಳು ಪ್ರಯೋಗಾಲಯಗಳಂತೆ ಹಿಪ್ಪುನೇರಳೆ ತೋಟದ ಮಣ್ಣು ಪರೀಕ್ಷೆ ಎಲೆ ವಿಶ್ಲೇಷಣೆ ಹಾಗೂ ರೇಷ್ಮೆ ಬೆಳೆಗಾರರ ಸಮಸ್ಯೆ ಪರಿಹರಿಸಲು ಹಾಗೂ ಸಂಪರ್ಕ ಕೇಂದ್ರಗಳಾಗಿ ಕೆಲಸ ನಿರ್ವಹಿಸಬೇಕು. ಈ ಘಟಕಗಳಲ್ಲಿ ಕೈಗೊಳ್ಳುವ ಪರೀಕ್ಷೆಗಳಿಗೆ ಸಮಾಲೋಚನೆಗೆ ಶುಲ್ಕ ಸಂಗ್ರಹಿಸಲು ಅವಕಾಶವಿದೆ ಮತ್ತು ಸೋಂಕು ನಿವಾರಕ/ರಾಸಾಯನಿಕ ಗೊಬ್ಬರ/ಸಲಕರಣೆಗಳ ಮಾರಾಟ ಕೇಂದ್ರಗಳಾಗಿಯೂ ಸೇವೆ ನೀಡಬಹುದಾಗಿದೆ.

**ಘಟಕ ದರ ರೂ.0.417 ಲಕ್ಷಗಳು ಸಹಾಯಧನ ರೂ.0.31275 ಲಕ್ಷಗಳು**

**10. ಖಾಸಗಿ ಬಿತ್ತನೆ ಕೋಠಿಗಳಿಗೆ ಆವರ್ತ ನಿಧಿ**

ಉತ್ತಮ ಗುಣಮಟ್ಟದ ಬಿತ್ತನೆ ಗೂಡು ಕೊಳ್ಳಲು ಖಾಸಗಿ ಬಿತ್ತನೆ ಕೋಠಿಗಳಿಗೆ ಬಂಡವಾಳವಿಲ್ಲದಿರುವುದು ಮಹತ್ತರ ಅಡಚಣೆಯಾಗಿದ್ದು, ಹಲವು ಬಾರಿ ಬೇಡಿಕೆಗೆ ಅನುಗುಣವಾಗಿ ಮೊಟ್ಟೆ ಉತ್ಪಾದಿಸಲು ಸಾಧ್ಯವಾಗದಂತಹ ಪರಿಸ್ಥಿತಿ ಉಂಟಾಗುತ್ತಿದೆ. ಇದನ್ನು ನಿವಾರಿಸಲು ಒಂದಾವರ್ತಿ ಆವರ್ತ ನಿಧಿಯನ್ನು ಪ್ರತಿ ಬಿತ್ತನೆ ಕೋಠಿಗೆ ರೂ.5.00ಲಕ್ಷ ದಂತೆ (ಇದರಲ್ಲಿ ಶೇ.50 ಕೇಂದ್ರದ ಪಾಲು, ಶೇ.50 ರಾಜ್ಯದ ಪಾಲು) ನೀಡಲು ಕಾರ್ಯಕ್ರಮ ರೂಪಿಸಿದೆ.

**11. ಕಿಸಾನ್ ನರ್ಸರಿ :**

ಹಿಪ್ಪುನೇರಳೆ ತೋಟ ಸ್ಥಾಪನೆಗೆ ಬಿತ್ತನೆ ಕಡ್ಡಿಗಳಿಗಿಂತ ನರ್ಸರಿಯಲ್ಲಿ ಬೆಳೆಸಿದ ಸಸಿಗಳು ಸದೃಢವಾಗಿ ಬೇರುಬಿಟ್ಟಿದ್ದು, ಆರೋಗ್ಯಕರವಾಗಿ 4 ತಿಂಗಳವರೆಗೆ ಬೆಳೆದ ಹಿಪ್ಪುನೇರಳೆ ಸಸಿ ನಾಟಿ ಮಾಡುವುದರಿಂದ ಹಿಪ್ಪುನೇರಳೆ ತೋಟ ಸ್ಥಾಪನೆಯಲ್ಲಿ ತಪ್ಪು ಗುಳಿಗಳಾಗುವುದಿಲ್ಲ, ನರ್ಸರಿ ಬೆಳೆಸುವುದು ಒಂದು ಲಾಭದಾಯಕ ಕಸಬಾಗಿರುವುದರಿಂದ, ವಾಣಿಜ್ಯ ಪ್ರಮಾಣದಲ್ಲಿ ಸಸಿ ಬೆಳೆಸುವುದನ್ನು ಪ್ರೋತ್ಸಾಹಿಸಲು ಸಹಾಯ ನೀಡಲಾಗುತ್ತದೆ.

| ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ (ರೂ.ಲಕ್ಷಗಳಲ್ಲಿ) | | | |
|---|---|---|---|---|
| | General | SDP/HKRDP | SCSP/TSP 90% | RKVY 50% |
| 1.50 | - | - | 1.35 | 0.75 |

**12. ಮಳೆ ಆಶ್ರಿತ ಹಿಪ್ಪುನೇರಳೆ ತೋಟದ ಮಣ್ಣಿನ ನೀರು ಸಂರಕ್ಷಣಾ ತಂತ್ರಜ್ಞಾನ ಅಳವಡಿಸಿ ಉತ್ಪಾದಕತೆ ಹೆಚ್ಚಿಸುವುದಕ್ಕೆ ಸಹಾಯ :**

1000 ಎಂ.ಎಂ.ಗಿಂತ ಕಡಿಮೆ ಮಳೆ ಪಡೆಯುತ್ತಿರುವ ಮಳೆ ಆಶ್ರಿತ ಹಿಪ್ಪುನೇರಳೆ ತೋಟದ ಸೊಪ್ಪಿನ ಇಳುವರಿ ಹಾಗೂ ಗುಣಮಟ್ಟ ತುಂಬಾ ಕಡಿಮೆಯಿರುತ್ತದೆ. ಮಳೆ ಆಶ್ರಯದಲ್ಲಿ ಬೆಳೆಯಲು ವಿಶಿಷ್ಟವಾದ ಹಿಪ್ಪುನೇರಳೆ ತಳಿ ಹಾಗೂ ಅದಕ್ಕಾಗಿಯೇ ನಿರ್ದಿಷ್ಟವಾದ ಅಂತರ ಬೇಸಾಯ, ಗೊಬ್ಬರ ಹಾಗೂ ಅದನ್ನು ಒದಗಿಸುವ ಪ್ರಮಾಣ, ಪದ್ಧತಿಗಳನ್ನು ಅಳವಡಿಸಲು ಶಿಫಾರಸ್ಸು ಮಾಡಬೇಕಾದ ಅಗತ್ಯತೆ ಇದೆ. ಮಣ್ಣಿನ ತೇವಾಂಶ ಹೀರಿಕೊಳ್ಳುವ ಸಾಮರ್ಥ್ಯವುಳ್ಳ ತಳಿಗಳನ್ನು ಮಾತ್ರ ಮಳೆ ಆಶ್ರಿತ ಪ್ರದೇಶದಲ್ಲಿ ಬೆಳೆಸಬಹುದಾಗಿದೆ. ಕೇಂದ್ರ ರೇಷ್ಮೆ ಮಂಡಳಿ ಮತ್ತು ಕೃಷಿ ವಿಶ್ವವಿದ್ಯಾಲಯಗಳ ಅಧ್ಯಯನದಿಂದ ಮಣ್ಣಿನ ತೇವಾಂಶ ಹಿಡಿದಿಡುವ ಸಾಮರ್ಥ್ಯತೆ ಹೆಚ್ಚಿಸುವ ತಾಂತ್ರಿಕತೆ ಅಳವಡಿಸಿಕೊಂಡಲ್ಲಿ, ಅಂತಹ ಮಳೆ ಆಶ್ರಿತ ತೋಟದ ಹಿಪ್ಪುನೇರಳೆ ಸೊಪ್ಪಿನ ಇಳುವರಿ, ಗುಣಮಟ್ಟ ಹೆಚ್ಚುವುದು ದೃಢಪಟ್ಟಿದೆ. ಮಳೆ ಆಶ್ರಿತ ಹಿಪ್ಪುನೇರಳೆ ತೋಟದಲ್ಲಿ ಬದು ಬಿಟ್ಟು ಬದುವಿನಲ್ಲಿ ಆಳವಾಗಿ

ಕಾಲುವೆ(ಟ್ರೆಂಚ್)ಗಳನ್ನು ತೆಗೆದು, ತೋಟದಲ್ಲಿ ಲಭ್ಯವಾಗುವ ಕಳೆ, ಹುಳುವಿನ ಕಸ, ಇತರೆ ಸಾವಯವ ಕಸವನ್ನು ತುಂಬಿಸಿ ಮಣ್ಣಿನಿಂದ ಮುಚ್ಚುವುದು(ಮಲ್ಚಿಂಗ್). ಈ ರೀತಿ ಮಾಡುವುದರಿಂದ ಮಣ್ಣಿನಲ್ಲಿ ತೇವಾಂಶ ಬಹಳ ಕಾಲದವರೆಗೆ ಉಳಿದು, ಸಸ್ಯಗಳು ನೀರನ್ನು ಹೀರಿಕೊಳ್ಳಲು ಸಾಧ್ಯವಾಗುತ್ತದೆ.

| ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ (ರೂ.ಲಕ್ಷಗಳಲ್ಲಿ) | | |
|---|---|---|---|
| | General 75% | SDP/HKRDP 80% | SCSP/TSP 90% |
| 0.10 | 0.075 | - | 0.09 |

## 13 ರೇಷ್ಮೆ ಸಂಪನ್ಮೂಲ ಕೇಂದ್ರ (Sericulture Resource Center)

ರೇಷ್ಮೆ ಸಂಪನ್ಮೂಲ ಕೇಂದ್ರಗಳನ್ನು ಆಯ್ಕೆಯಾದ ಕ್ಲಸ್ಟರ್ ವ್ಯಾಪ್ತಿಯಲ್ಲಿ ತರಬೇತಿ ನೀಡುವುದರೊಂದಿಗೆ ಉದ್ಯಮದಲ್ಲಿ ಮುಂದುವರೆಯಲು ಸಹಾಯ ಕೇಂದ್ರಗಳಾಗಿ ರಚಿಸುವುದು. ಇದನ್ನು ಒಬ್ಬ ಪ್ರಗತಿ ಪರ ಮುಂದುವರೆದ ರೇಷ್ಮೆ ಕೃಷಿಕ/ಸರ್ಕಾರೇತರ ಲಾಭರಹಿತ ಸಂಸ್ಥೆ/ರೇಷ್ಮೆ ಸಹಕಾರಿ ಸಂಘಗಳು ಕ್ಲಸ್ಟರ್‌ನ ಬೆಳೆಗಾರರ ಹಿತದೃಷ್ಟಿಯಿಂದ ಮುಂದಾಳತ್ವ ವಹಿಸುವುದು. ಇದು ಎರಡು ಭಾಗಗಳನ್ನು ಒಳಗೊಂಡಿರುತ್ತದೆ.

1. ಬಂಡವಾಳ ವೆಚ್ಚ – ರೂ.1.00 ಲಕ್ಷ (ರೂ.0.60 ಲಕ್ಷ ಶೆಡ್ ನಿರ್ಮಾಣಕ್ಕೆ, ರೂ.0.40 ಲಕ್ಷ ಟಿ.ವಿ.,ಡಿ.ವಿ.ಡಿ,ಬ್ಲಾಕ್ ಬೋರ್ಡ್, ಬೋರ್ಡ್, ಮೂಲಭೂತ ಆಸನಗಳು/ಚಾಪೆ/, ಹುಳು ಸಾಕಾಣಿಕೆ ಸಲಕರಣೆ)
2. ಪುನರಾವರ್ತಿತ ವೆಚ್ಚ – ರೂ.1.50 ಲಕ್ಷ (ವಾರ್ಷಿಕ ರೂ.0.30 ಲಕ್ಷದಂತೆ 5 ವರ್ಷಗಳ ನಿರ್ವಹಣಾ/ಪುನರಾವರ್ತಿತ ವೆಚ್ಚ ತರಬೇತಿಗೆ)

## 14. ಫಲಾನುಭವಿಗಳ ಬಲವರ್ಧನೆ

ರೇಷ್ಮೆ ಉದ್ಯಮದ ಅಭಿವೃದ್ಧಿಗೆ ಆಗಿಂದಾಗ್ಗೆ ಹೊರ ಬರುವ ಹೊಸ ತಾಂತ್ರಿಕತೆಗಳು ಮತ್ತು ಉದ್ಯಮದಲ್ಲಿ ಸುತ್ತ–ಮುತ್ತ ಆಗಿರುವ ಬದಲಾವಣೆಗಳನ್ನು ರೇಷ್ಮೆ ಉದ್ಯಮದಲ್ಲಿ ಭಾಗೀಯಾಗಿರುವ ರೇಷ್ಮೆ ಕೃಷಿಕರು, ರೇಷ್ಮೆ ನೂಲು ಬಿಚ್ಚಾಣಿಕೆದಾರರು ಹಾಗೂ ಉದ್ಯಮದಲ್ಲಿ ತೊಡಗಿರುವ ಕುಶಲಕರ್ಮಿಗಳಿಗೆ ಇಲಾಖೆಯ ತರಬೇತಿ ಸಂಸ್ಥೆಗಳ ಮುಖಾಂತರ ಅಥವಾ ಸ್ಥಳೀಯವಾಗಿ ತರಬೇತಿ ನೀಡಿ ಹಾಗೂ ಅಧ್ಯಯನ ಪ್ರವಾಸ ಕೈಗೊಂಡು ಅವರ ತಾಂತ್ರಿಕ ಜ್ಞಾನ ಹೆಚ್ಚಿಸಲು ಅವಕಾಶ ಕಲ್ಪಿಸಿದೆ. ಕಾರ್ಯಕ್ರಮದಲ್ಲಿ ತರಬೇತಿಗಾಗಿ ರೂ.3000/– ಹಾಗೂ ಅಧ್ಯಯನ ಪ್ರವಾಸಕ್ಕಾಗಿ ರೂ.2000/–(ತರಬೇತಿ ಪಡೆದ 4 ಮಂದಿಯಲ್ಲಿ ಒಬ್ಬರಿಗೆ ಅಧ್ಯಯನ ಪ್ರವಾಸಕ್ಕೆ ಅವಕಾಶವಿದೆ)ಗಳ ಅವಕಾಶ ಕಲ್ಪಿಸಿದೆ. ಆದರೆ ಹೆಚ್ಚು ಮಂದಿ ಭಾಗೀದಾರರನ್ನು ತರಬೇತಿಗೆ ಒಳಪಡಿಸಲು ಘಟಕ ದರವನ್ನು ರೇಷ್ಮೆ ಕೃಷಿಕರಿಗೆ ರೂ.3500/–ಕ್ಕೆ ಹಾಗೂ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ರೂ.1750/–ಕ್ಕೆ ಮಿತಿಗೊಳಿಸಿದೆ.

## ರಾಜ್ಯವಲಯದ ಕಾರ್ಯಕ್ರಮಗಳು

### ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು ಕಾರ್ಯಕ್ರಮ

**1.ದ್ವಿತಳಿ ಚಾಕಿಗೆ ಪ್ರೋತ್ಸಾಹಧನ:–**

ಈ ಕಾರ್ಯಕ್ರಮದಲ್ಲಿ 100 ಮೊಟ್ಟೆಗಳ ದ್ವಿತಳಿ ಚಾಕಿಗೆ ರೂ.1000.00ಗಳ ಪ್ರೋತ್ಸಾಹಧನ ನೀಡಲಾಗುವುದು.

**2. ಹಣ್ಣು ಹುಳುವಿನ ಮನೆ ನಿರ್ಮಾಣಕ್ಕೆ ಸಹಾಯಧನ(ಮೌಂಟಿಂಗ್ ಹಾಲ್)**

ಹಣ್ಣಾಗಿರುವ ಹುಳುಗಳನ್ನು ವಾತಾವರಣದಲ್ಲಿ ಅಗುವ ಉಷ್ಣಾಂಶ ಮತ್ತು ಶೈತ್ಯಾಂಶಗಳ ವೈಪರೀತ್ಯಗಳಿಂದ ಕಾಪಾಡಿ ಉತ್ತಮ ಗುಣಮಟ್ಟದ ಗೂಡುಗಳನ್ನು ಕಟ್ಟುವ ಪರಿಸರ ಒದಗಿಸುವುದು ಮೌಂಟಿಂಗ್ ಹಾಲ್ ನಿರ್ಮಾಣದ ಉದ್ದೇಶ. ಹಣ್ಣಾದ ಹುಳುಗಳನ್ನು ವ್ಯವಸ್ಥಿತವಾಗಿ ಚಂದ್ರಿಕೆಗಳಲ್ಲಿ ಬಿಡುವುದು ಅಲ್ಲಿಯ ವಾತಾವರಣ ನೇರವಾಗಿ ಗೂಡಿನ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ. ಈ ಯೋಜನೆಯಡಿಯಲ್ಲಿ ಸಹಾಯಧನ ಪಡೆಯಲು ರೈತರು ಸ್ಥಿರ ಹಿಪ್ಪುನೇರಳೆ ತೋಟ ವ್ಯವಸ್ಥಿತವಾದ ಹುಳು ಸಾಕಾಣಿಕೆ ಮನೆ ಮತ್ತು ಹುಳು ಸಾಕಾಣಿಕೆಯನ್ನು ಕೈಗೊಳ್ಳುತ್ತಿರಬೇಕು.

**ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ಕೆಳಕಂಡಂತೆ ಸಹಾಯಧನ ಒದಗಿಸಲಾಗುವುದು.**

| ಕ್ರ ಸಂ. | ಹಣ್ಣು ಹುಳುವಿನ ಮನೆಯ ಉದ್ದಗಳ, ವಿಸ್ತೀರ್ಣ (ಚ ಅಡಿ) | ಮನೆಯ ಛಾವಣಿ ಮಾದರಿ | ಸಹಾಯಧನ | ಹಿಪ್ಪುನೇರಳೆ ಕ್ಷೇತ್ರ |
|---|---|---|---|---|
| 1 | 20 X 30 = 600 | ಮಂಗಳೂರು ಹೆಂಚು/ಎ.ಸಿ.ಶೀಟ್/ಆರ್.ಸಿ.ಸಿ. | 18,000 | 1 ಎಕರೆ |
| 2. | 20 X 50 =1000 | ಮಂಗಳೂರು ಹೆಂಚು/ಎ.ಸಿ.ಶೀಟ್/ಆರ್.ಸಿ.ಸಿ. | 30,000 | 1 ½ ಎಕರೆ |
| 3. | 25 X 50 =1250 | ಮಂಗಳೂರು ಹೆಂಚು/ಎ.ಸಿ.ಶೀಟ್/ಆರ್.ಸಿ.ಸಿ. | 37,500 | 2 ಎಕರೆ |
| 4. | 30 X 50 =1500 | ಮಂಗಳೂರು ಹೆಂಚು/ಎ.ಸಿ.ಶೀಟ್/ಆರ್.ಸಿ.ಸಿ. | 45,000 | 2 ½ ಎಕರೆ |
| 5. | 30 X 60 =1800 | ಮಂಗಳೂರು ಹೆಂಚು/ಎ.ಸಿ.ಶೀಟ್/ಆರ್.ಸಿ.ಸಿ. | 50,000ಕ್ಕೆ ಮಿತಿಗೊಳಿಸಿದೆ | 3 ಎಕರೆ |

**3 ಬಿತ್ತನೆ ಪ್ರದೇಶದ ಹಿಪ್ಪುನೇರಳೆ ತೋಟಗಳಿಗೆ ಸಸ್ಯ ಸಂವರ್ಧಕ ಸರಬರಾಜು**

ಹಿಪ್ಪುನೇರಳೆ ತೋಟಗಳಿಗೆ ಭಾದಿಸುವ ಕ್ಲೋರೋಸಿಸ್ ತಡೆಗಟ್ಟಲು ಬಿತ್ತನೆ ಪ್ರದೇಶದ ರೇಷ್ಮೆ ಬೆಳೆಗಾರರ ಹಿಪ್ಪುನೇರಳೆ ತೋಟಗಳಿಗೆ ಸಂಶೋಧನಾ ಸಂಸ್ಥೆಗಳು ಅಭಿವೃದ್ಧಿ ಪಡಿಸಿರುವ ಲಘು ಪೋಷಕಾಂಶಗಳುಳ್ಳ ಸಸ್ಯ ಸಂವರ್ದಕ ಸರಬರಾಜು ಉದ್ದೇಶಿಸಿದೆ.

**4. ಹಿಪ್ಪುನೇರಳೆ ತೋಟಕ್ಕೆ ಟ್ರಂಚಿಂಗ್ / ಮಲ್ಚಿಂಗ್ ಮಾಡಲು ಸಹಾಯಧನ**

ಹಾಲಿ ಇರುವ ಹಿಪ್ಪುನೇರಳೆ ವಿಸ್ತೀರ್ಣದಲ್ಲಿ ಪಡೆಯಲಾಗುತ್ತಿರುವ ಹಿಪ್ಪುನೇರಳೆ ಸೊಪ್ಪಿನ ಇಳುವರಿಯನ್ನು ಹೆಚ್ಚಿಸುವುದು ಅವಶ್ಯವಾಗಿದೆ ಇದರಿಂದ ಅಧಿಕ ಹಿಪ್ಪುನೇರಳೆ ಸೊಪ್ಪಿನ ಇಳುವರಿ ಪಡೆದು ಅಧಿಕ ಮೊಟ್ಟೆಗಳನ್ನು ಚಾಕಿ ಮಾಡಬಹುದಾಗಿರುತ್ತದೆ. ಇದರಿಂದ ಹಿಪ್ಪುನೇರಳೆ ತೋಟಗಳ ಗುಣಮಟ್ಟ ಹಾಗೂ ಸೊಪ್ಪಿನ ಇಳುವರಿಯನ್ನು ಅಧಿಕಗೊಳಿಸಿ ಹಿಪ್ಪುನೇರಳೆ ತೋಟದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತದೆ.

ಅಲ್ಲದೆ ರಾಸಾಯನಿಕ ಗೊಬ್ಬರದ ಬಳಕೆ ಗಣನೀಯವಾಗಿ ಕಡಿಮೆಯಾಗಿ ಪರಿಸರದ ಸಂರಕ್ಷಣೆಯಾಗುತ್ತದೆ. ಹಾಗೂ ಮಣ್ಣಿನ ಸವಕಳಿಯು ಕಡಿಮೆ ಇರುತ್ತದೆ.

ಹಿಪ್ಪುನೇರಳೆ ತೋಟದಲ್ಲಿ ಸಾಲು ಬಿಟ್ಟು ಸಾಲು ಆರು ತಿಂಗಳಗೊಮ್ಮೆ ಕನಿಷ್ಠ 2.5 ಅಡಿ ಅಗಲ, 1.5 ಅಡಿ ಆಳದ ಟ್ರಂಚ್ ಮಾಡಿ, ಟ್ರಂಚ್‌ಗೆ ಸಸ್ಯ ಜನ್ಯ ತ್ಯಾಜ್ಯ ವಸ್ತುಗಳನ್ನು ತುಂಬಬೇಕು. ಇದರ ಮೇಲೆ ಒಂದು ಗುಂಟೆಗೆ 200 ಕೆ.ಜಿ. ಯಂತೆ ಕೊಟ್ಟಿಗೆ ಗೊಬ್ಬರ ನೀಡುವುದು. ಅದರ ಮೇಲೆ ಕೆಮ್ಮಣ್ಣು ಮತ್ತು ಕೆರೆಗೋಡು ಮಣ್ಣಿನಿಂದ ಮುಚ್ಚುವುದು. ನಂತರ ಟ್ರಂಚ್‌ಗಳನ್ನು ಮಣ್ಣಿನಿಂದ ಮುಚ್ಚುವುದು. ಇದು ಚೆನ್ನಾಗಿ ಕಳಿತು ಜೈವಿಕ ಗೊಬ್ಬರವಾಗುತ್ತದೆ. ಇದರಿಂದ ಸತ್ವಯುತ, ಹಿಪ್ಪುನೇರಳೆ ಸೊಪ್ಪು ಸಿಗುತ್ತದೆ. ಒಂದು ಎಕರೆ ಟ್ರಂಚಿಂಗ್ ಮತ್ತು ಮಲ್ಚಿಂಗ್ ಮಾಡಲು ಘಟಕದರ ರೂ.30,000/–ಗಳಿಗೆ ನಿಗಧಿಪಡಿಸಿದ್ದು ಶೇ.90ರಷ್ಟನ್ನು ಅಂದರೆ ರೂ.27,000/–ಗಳನ್ನು ಸಹಾಯಧನವಾಗಿ ನೀಡಲಾಗುವುದು.
ಆರ್‌ಕೆವಿವೈ ಅಡಿ ರೂ.15,000/–(50%) ಸಹಾಯಧನ ನೀಡಲಾಗುವುದು.

## 5. ಕೊಳವೆ ಬಾವಿಗಳ ಪುನಶ್ಚೇತನ

ಕೊಳವೆ ಬಾವಿಗಳನ್ನು ಮಳೆ ನೀರುಕೊಯ್ಲು ಮೂಲಕ ಪುನಶ್ಚೇತನಗೊಳಿಸುವುದು. ನೀರು ಅಮೂಲ್ಯ ಪ್ರಕೃತಿದತ್ತವಾದ ಸಂಪನ್ಮೂಲ. ಹಿಪ್ಪುನೇರಳೆ ವ್ಯವಸಾಯಕ್ಕೆ 8–10 ದಿನಗಳ ಅಂತರದಲ್ಲಿ 1½ – 2 ಇಂಚುಗಳಷ್ಟು ನೀರು ಅವಶ್ಯಕ. ಪರಿಣಾಮಕಾರಿ ನೀರಿನ ಬಳಕೆಗೆ ಹನಿನೀರಾವರಿ ಪದ್ಧತಿ ಶಿಫಾರಸ್ಸು ಮಾಡಲಾಗಿದೆ. ಅಂತರ್ಜಲದ ಮಟ್ಟ ಕುಸಿದು ಕೊಳವೆ ಬಾವಿಗಳಲ್ಲಿ ದೊರೆಯುವ ನೀರಿನ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಅದ್ದರಿಂದ ಕೊಳವೆ ಬಾವಿಗಳನ್ನು ಪುನಶ್ಚೇತನಗೊಳಿಸುವುದು ಅವಶ್ಯಕವಾಗಿದೆ. ಕೊಳವೆ ಬಾವಿ ಸುತ್ತ ಇಂಗು ಗುಂಡಿಯನ್ನು ನಿರ್ಮಿಸಿ ಸಿಮೆಂಟಿನ ರಿಂಗುಗಳನ್ನು ಅಳವಡಿಸ ಬೇಕು. ಇಂಗು ಗುಂಡಿಗಳನ್ನು ನಿರ್ಮಿಸಿ ಮಳೆ ನೀರನ್ನು ಶೇಖರಿಸಿ ಕೊಳವೆಬಾವಿಗಳನ್ನು ಪುನಶ್ಚೇತನಗೊಳಿಸುವುದು ಅವಶ್ಯಕವಾಗಿರುತ್ತದೆ. ಇಂಗು ಗುಂಡಿ ತೋಡಲು ಘಟಕ ದರ ರೂ.30,000/– ನಿಗದಿಪಡಿಸಿದ್ದು ಶೇಕಡ 90ರಷ್ಟನ್ನು ಅಂದರೆ ರೂ.27,000/–ಗಳನ್ನು ಸಹಾಯಧನವಾಗಿ ನೀಡಲಾಗುವುದು.

## 6. ಗ್ರಾಹಕರ ಸೇವಾ ಕೇಂದ್ರ

ರೇಷ್ಮೆ ಉತ್ಪಾದಕತೆ ಹಾಗೂ ಉತ್ಪಾದನೆಯನ್ನು ಹೆಚ್ಚಿಸಲು ಸ್ಥಳೀಯ ಸರ್ಕಾರೇತರ ಮತ್ತು ಉದ್ಯಮಶೀಲರನ್ನು ತೊಡಗಿಸಿಕೊಂಡು 100 ಗ್ರಾಹಕರ ಸೇವಾ ಕೇಂದ್ರಗಳನ್ನು ಆಯೋಜಿಸಲು ಉದ್ದೇಶಿಸಿದೆ. ಗ್ರಾಹಕರ ಸೇವಾ ಕೇಂದ್ರಕ್ಕೆ ಪರಿಕರಗಳನ್ನು ಶೇ. 90ರ ಸಹಾಯಧನದಲ್ಲಿ ಒದಗಿಸಲು ಉದ್ದೇಶಿಸಿದೆ. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಪ್ರಾರಂಭಿಕವಾಗಿ 1 ಕೋಟಿ ರೂ. ಗಳ ಅನುದಾನವನ್ನು ಒದಗಿಸಲಾಗುವುದು.

## 7. ಮಣ್ಣಿನ ಫಲವತ್ತತೆ ಜೈವಿಕ ಗೊಬ್ಬರ (ಆರ್‌ಕೆವಿವೈ)

ಹಿಪ್ಪುನೇರಳೆ ತೋಟಕ್ಕೆ ಸಾರಜನಕ ಸ್ಥಿರೀಕರಿಸುವ(ಪ್ರಕೃತಿ)/ರಂಜಕ ಕರಗಿಸುವ (ಸೆರಿಫಾಸ್) ಜೈವಿಕ ಗೊಬ್ಬರ ಬಳಸಿದಲ್ಲಿ ಸಾರಜನಕ/ರಂಜಕ ರಸಗೊಬ್ಬರದ ಖರ್ಚನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿ ರಸಗೊಬ್ಬರಗಳಿಂದ ಆಗುವ ದುಷ್ಪರಿಣಾಮ ಕಡಿಮೆಗೊಳಿಸಬಹುದು. ಪ್ರತಿ ಎಕರೆ ಹಿಪ್ಪುನೇರಳೆ ತೋಟಕ್ಕೆ ಎರಡು ಸಮಕಂತುಗಳಲ್ಲಿ 10 ಕೆ.ಜಿ ಜೈವಿಕ ಗೊಬ್ಬರ ನೀಡಬೇಕು. ಜೈವಿಕ ಗೊಬ್ಬರವನ್ನು ನೀಡುವ ಮುನ್ನ ಕೊಟ್ಟಿಗೆ ಗೊಬ್ಬರದೊಂದಿಗೆ ಬೆರೆಸಿ ಸಾಲುಗಳ ನಡುವೆ, ದೋಣಿ ಸಾಲುಗಳಲ್ಲಿ ನೀಡಿ ಮಣ್ಣು ಮುಚ್ಚಿ ನೀರು ಹಾಯಿಸಬೇಕು. ರಸಗೊಬ್ಬರಗಳನ್ನು ಉಪಯೋಗಿಸುವ 15 ದಿನಗಳ ಮುನ್ನ ಅಥವ ನಂತರ ಜೈವಿಕ ಗೊಬ್ಬರ ನೀಡಬೇಕು. ಜೈವಿಕ ಗೊಬ್ಬರ ನೀಡಿದ ಕೂಡಲೆ ನೀರು ಹಾಯಿಸಬೇಕು. ಇದರಿಂದ

ಜೀವಾಣುಗಳು ಒಣಗಿ ಸಾಯುವುದು ತಪ್ಪುತ್ತವೆ. ಜೈವಿಕ ಗೊಬ್ಬರ ಬಳಕೆ ಮಾಡುವುದರಿಂದ ವಾರ್ಷಿಕ ಸಾರಜನಕ/ರಂಜಕ ರಸಗೊಬ್ಬರದ ಪ್ರಮಾಣದಲ್ಲಿ ಮಿತವ್ಯಯ ಸಾಧಿಸಬಹುದು.

ಪ್ರತಿ ರೇಷ್ಮೆ ಬೆಳೆಗಾರರು/ವರ್ಷಕ್ಕೆ/ಎಕರೆಗೆ 5 ಕೆಜಿಯಂತೆ, ಎರಡು ಕಂತಿನಲ್ಲಿ ಜೈವಿಕ ಗೊಬ್ಬರವನ್ನು ಹಾಕಬೇಕಾಗುತ್ತದೆ. ಮೊದಲನೆ ಕಂತಿನ ಜೈವಿಕ ಗೊಬ್ಬರವನ್ನು ಇಲಾಖೆವತಿಯಿಂದ ಕೇಂದ್ರ/ರಾಜ್ಯ ಸರ್ಕಾರದ ರೇಷ್ಮೆ ಸಂಶೋಧನಾ ಸಂಸ್ಥೆಯಿಂದ ಪರೀಕ್ಷಿಸಲ್ಪಟ್ಟ ಹಾಗೂ ಶಿಫಾರಸ್ಸು ಮಾಡಲ್ಪಟ್ಟ ಸಂಸ್ಥೆಯಿಂದ ನಿಯಮಾನುಸಾರ ಖರೀದಿಸಿ ಸರಬರಾಜು ಮಾಡುವುದು.

ಘಟಕದರ ರೂ.750/– ಸಹಾಯಧನ ರೂ.350/– (50%)

**8. ಮೈಸೂರು ಬಿತ್ತನೆವಲಯದ ರೇಷ್ಮೆ ಬೆಳೆಗಾರರಿಗೆ ಬಿದಿರಿನ ಚಂದ್ರಿಕೆ ಖರೀದಿಗೆ ಸಹಾಯಧನ**

(ಆರ್‌ಕೆವಿವೈ)

ಹಣ್ಣು ಹುಳುಗಳ ಸುಲಭ ಕಾರ್ಯನಿರ್ವಹಣೆ ಮತ್ತು ಉತ್ತಮ ಗುಣಮಟ್ಟದ ರೇಷ್ಮೆ ಗೂಡು ಪಡೆಯಲು ಬಿದಿರಿನ ಚಂದ್ರಿಕೆಗಳನ್ನು ಬಳಸುವುದು ಸೂಕ್ತವಾಗಿದೆ.ಅದ್ದರಿಂದ ಮೈಸೂರು ಬಿತ್ತನೆವಲಯದ ರೇಷ್ಮೆ ಬೆಳೆಗಾರರಿಗೆ ಬಿದಿರಿನ ಚಂದ್ರಿಕೆ ಖರೀದಿಗೆ ಸಹಾಯಧನ ನೀಡಲಾಗುವುದು.

100 ಮೊಟ್ಟೆಗೆ 40 ಚಂದ್ರಿಕೆ/250 ಮೊಟ್ಟೆಗೆ 100 ಚಂದ್ರಿಕೆ ಬೇಕಾಗುತ್ತದೆ. ಒಂದು ಚಂದ್ರಿಕೆಗೆ ರೂ.650/– ರಂತೆ 100 ಚಂದ್ರಿಕೆಗೆ ರೂ.65000/– ಅಗುತ್ತದೆ.

## ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆ

**1. ರೀಲಿಂಗ್ ಶೆಡ್ ನಿರ್ಮಾಣಕ್ಕೆ ಸಹಾಯ**

ಸಾಮಾನ್ಯವಾಗಿ ರೀಲಿಂಗ್ ಚಟುವಟಿಕೆಗಳು ವಾಸದ ಮನೆಯ ಒಂದು ಭಾಗದಲ್ಲಿ ನಡೆಯುತ್ತಿದ್ದು, ಇದು ಕೆಲಸ ಮಾಡುವ ಸ್ಥಳದ ವಾತಾವರಣದ ಸೂಕ್ತತೆ ದೃಷ್ಟಿಯಿಂದ ರೀಲಿಂಗ್ ಶೆಡ್‌ಗಳನ್ನು ಆದಷ್ಟು ಪ್ರತ್ಯೇಕವಾಗಿ, ಗುರುತಿಸಿದ ರೀಲಿಂಗ್ ಪಾರ್ಕ/ಕೈಗಾರಿಕಾ ಕ್ಷೇತ್ರಗಳಲ್ಲಿ ನಿರ್ಮಿಸಿದಲ್ಲಿ (ವಿದ್ಯುತ್, ನೀರು, ಮುಂತಾದ ಸೌಕರ್ಯಗಳು ಸಾಮೂಹಿಕವಾಗಿ ದೊರೆಯುತ್ತವೆ) ಈ ಚಟುವಟಿಕೆಗಳನ್ನು ಕೈಗೊಳ್ಳುವುದು ಅನುಕೂಲವಾಗುವುದು. ವಾಸದ ಮನೆಯಿಂದ ಪ್ರತ್ಯೇಕವಾಗಿ ನಿರ್ಮಿಸಿ ರೀಲಿಂಗ್ ಶೆಡ್‌ಗಳಿಗೆ ಸಹಾಯಧನ ನೀಡಬಹುದಾಗಿದೆ.

**ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ರೀಲಿಂಗ್ ಶೆಡ್‌ಗಳ ನಿರ್ಮಾಣಕ್ಕೆ ಪರಿಗಣಿಸಲು ಪರಿಮಿತಿಗಳು**

| ರೀಲಿಂಗ್ ಶೆಡ್ ವರ್ಗ | ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ (ರೂ.ಲಕ್ಷಗಳಲ್ಲಿ) | |
|---|---|---|---|
| | | General 50% | SCSP/TSP 90% |
| ಸುಧಾರಿತ ಕಾಟೇಜ್ ಬೇಸಿನ್ ಘಟಕ 600 ಚ.ಅಡಿ 36 ತುದಿಗಳು | 5.40 | 2.70 | 4.86 |
| 600 ಚ.ಅಡಿ 48 ತುದಿಗಳು | 5.40 | 2.70 | 4.86 |
| ಮಲ್ಟಿಎಂಡ್ ರೀಲಿಂಗ್ ಘಟಕ 600 ಚ.ಅಡಿ 6 ಬೇಸಿನ್ | 5.40 | 2.70 | 4.86 |
| 1200 ಚ.ಅಡಿ 10 ಬೇಸಿನ್ | 7.20 | 3.60 | 6.48 |

ಗಣನೀಯ ಪ್ರಮಾಣದಲ್ಲಿ ಕಚ್ಚಾ ರೇಷ್ಮೆ ಸುಧಾರಿತ ಕಾಟೇಜ್ ಬೇಸಿನ್‌ಗಳಿಂದ ಉತ್ಪಾದನೆಯಾಗುತ್ತಿದೆ. ಅಸಂಪ್ರದಾಯಿಕ ಪ್ರದೇಶದಲ್ಲಿ ಮಾತ್ರ ನೊಂದಾಯಿತ ರೇಷ್ಮೆ ನೂಲು ಬಿಚ್ಚಾಣಿಕೆದಾರರಾಗಿದ್ದು, ಚಾಲ್ತಿಯಲ್ಲಿರುವ ದೃಢೀಕರಿಸಿದ ಅನುಜ್ಞಾಪತ್ರ/ರೇಷ್ಮೆ ಕಾರ್ಡ್ ಹೊಂದಿರುವವರಿಗೆ ಮಾತ್ರ ಸದರಿ ಕಾರ್ಯಕ್ರಮದಡಿ ಸಹಾಯ ನೀಡಬಹುದಾಗಿದೆ.

**ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಸುಧಾರಿತ ಕಾಟೇಜ್ ಬೇಸಿನ್ ಅಳವಡಿಕೆ**

| ಸುಧಾರಿತ ಕಾಟೇಜ್ ಬೇಸಿನ್ ಘಟಕ | ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ (ರೂ.ಲಕ್ಷಗಳಲ್ಲಿ) | |
|---|---|---|---|
| | | General 75% | SCSP/TSP 90% |
| 36 ತುದಿಗಳು | 3.54 | 2.655 | 3.180 |
| 48 ತುದಿಗಳು | 3.93 | 2.950 | 3.537 |

## 2. ಮಲ್ಟಿಎಂಡ್ ರೀಲಿಂಗ್ ಘಟಕ ಸ್ಥಾಪನೆಗೆ ಸಹಾಯ

ಅಂತರರಾಷ್ಟ್ರೀಯ ಗುಣಮಟ್ಟದ ರೇಷ್ಮೆ ಉತ್ಪಾದನೆ ಪ್ರೋತ್ಸಾಹಿಸಲು ಮಲ್ಟಿಎಂಡ್ ರೀಲಿಂಗ್ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಒಬ್ಬ ಉದ್ಯಮಿ / ಎಸ್.ಪಿ.ವಿ (A group in Special Purpose Vehicle) ಮಾದರಿ ಗುಂಪು ಮಲ್ಟಿಎಂಡ್ ರೀಲಿಂಗ್ ಘಟಕಗಳನ್ನು ಸ್ಥಾಪಿಸಿದ್ದಲ್ಲಿ ಸೌಲಭ್ಯ ಒದಗಿಸಲಾಗುವುದು.

**ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಮಲ್ಟಿಎಂಡ್ ರೀಲಿಂಗ್ ಘಟಕ ಸ್ಥಾಪನೆ**

| ಮಲ್ಟಿಎಂಡ್ ರೀಲಿಂಗ್ ಘಟಕ | ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ (ರೂ.ಲಕ್ಷಗಳಲ್ಲಿ) | |
|---|---|---|---|
| | | General 75% | SCSP/TSP 90% |
| 6 ಬೇಸಿನ್ | 11.05 | 8.288 | 9.945 |
| 10 ಬೇಸಿನ್ | 14.05 | 10.537 | 12.645 |

## 3. ಮಲ್ಟಿಎಂಡ್ ರೀಲಿಂಗ್ ಘಟಕ ಪುನಶ್ಚೇತನ

9ನೇ ಮತ್ತು 10ನೇ ಪಂಚವಾರ್ಷಿಕ ಯೋಜನೆಯಡಿ ಮಲ್ಟಿ ಎಂಡ್ ರೀಲಿಂಗ್ ಘಟಕ ಅಳವಡಿಸಿರುವ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಅಗತ್ಯತೆ ಮೇರೆಗೆ ಘಟಕವನ್ನು ಪುನಶ್ಚೇತನಗೊಳಿಸಲು ಸೌಲಭ್ಯ ಒದಗಿಸಲಾಗುವುದು.

| ಮಲ್ಟಿಎಂಡ್ ರೀಲಿಂಗ್ ಘಟಕ ಪುನಶ್ಚೇತನ | ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ (ರೂ.ಲಕ್ಷಗಳಲ್ಲಿ) | |
|---|---|---|---|
| | | General 75% | SCSP/TSP 90% |
| | 3.64 | 2.74 | 3.276 |

## 1. ಸ್ವಯಂಚಾಲಿತ ರೀಲಿಂಗ್ (ARM) ಘಟಕ ಸ್ಥಾಪನೆಗೆ ಸಹಾಯ

ಅಂತರರಾಷ್ಟ್ರೀಯ ಗುಣಮಟ್ಟದ 2ಎ ಗ್ರೇಡ್ ಹಾಗೂ ಅದಕ್ಕೂ ಹೆಚ್ಚಿನ ಗ್ರೇಡ್‌ನ ರೇಷ್ಮೆ ಉತ್ಪಾದನೆ ಮಾಡಲು ಸ್ವಯಂಚಾಲಿತ ರೀಲಿಂಗ್ ಘಟಕ ಸ್ಥಾಪನೆ ಮಾಡಲಾಗುತ್ತಿದೆ. ಈ ಕಾರ್ಯಕ್ರಮದಡಿ 400 / 200 ತುದಿಗಳ ಘಟಕಗಳು ಲಭ್ಯವಿರುತ್ತದೆ. ಒಬ್ಬ ಉದ್ಯಮಿ / ಎಸ್.ಪಿ.ವಿ (A group in Special Purspose Vehicle) ಮಾದರಿ ಗುಂಪುಗಳು ಈ ಸೌಲಭ್ಯ ಪಡೆಯಬಹುದಾಗಿದೆ. ಎ.ಆರ್.ಎಂ. ಘಟಕಗಳು ದಿನಕ್ಕೆ 2 ಪಾಳಿಗಳಲ್ಲಿ ಕೆಲಸ ನಿರ್ವಹಿಸಿದಲ್ಲಿ ಆರ್ಥಿಕವಾಗಿ ಲಾಭದಾಯಕವಾಗುತ್ತದೆ.

**ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಸ್ವಯಂಚಾಲಿತ ರೀಲಿಂಗ್ (ARM) ಘಟಕ ಸ್ಥಾಪನೆ**

| ಸ್ವಯಂಚಾಲಿತ ರೀಲಿಂಗ್ (ARM) ಘಟಕ | ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ (ರೂ.ಲಕ್ಷಗಳಲ್ಲಿ) | | |
|---|---|---|---|---|
| | | General 75% | SDP/HKRDP 80% | SCSP/TSP 90% |
| 200 ತುದಿಗಳು | 72.97 | 54.7275 | 58.376 | 65.673 |
| 400 ತುದಿಗಳು | 135.00 | 101.250 | 108.00 | 121.50 |

## 6. ಸ್ವಯಂಚಾಲಿತ ಡೂಪಿಯಾನ್ ರೀಲಿಂಗ್ ಘಟಕ ಸ್ಥಾಪನೆಗೆ ಸಹಾಯ

ಕಳಪೆ ಗುಣಮಟ್ಟದ ಹಾಗೂ ಡಬಲ್ ಕಕೂನ್ಸ್‌ಗಳನ್ನು ಉಪಯೋಗಿಸಿ ಸ್ವಯಂಚಾಲಿತ ಡೂಪಿಯಾನ್ ಘಟಕದಿಂದ ರಫ್ತಿನ ಗುಣಮಟ್ಟದ ಡೂಪಿಯನ್ ರೇಷ್ಮೆಯನ್ನು ಉತ್ಪಾದಿಸಲಾಗುತ್ತದೆ. ಸ್ವಯಂಚಾಲಿತ ಡೂಪಿಯಾನ್ ಘಟಕ ಸ್ಥಾಪನೆಯಿಂದ ಕಳಪೆ ಗುಣಮಟ್ಟದ ಗೂಡಿಗೆ ಉತ್ತಮ ಬೆಲೆ ನೀಡಿದಂತಾಗುತ್ತದೆ. ಒಬ್ಬ ಉದ್ಯಮಿ / ಎಸ್.ಪಿ.ವಿ (A group in Special Purspose Vehicle) ಮಾದರಿ ಗುಂಪುಗಳು ಈ ಸೌಲಭ್ಯ ಪಡೆಯಬಹುದಾಗಿದೆ. ಈ ಘಟಕಗಳು ದಿನಕ್ಕೆ 2 ಪಾಳಿಗಳಲ್ಲಿ ಕೆಲಸ ನಿರ್ವಹಿಸಿದಲ್ಲಿ ಆರ್ಥಿಕವಾಗಿ ಲಾಭದಾಯಕವಾಗುತ್ತದೆ.

**ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಸ್ವಯಂಚಾಲಿತ ಡೂಪಿಯಾನ್ ರೀಲಿಂಗ್ ಘಟಕ ಸ್ಥಾಪನೆ**

| ಸ್ವಯಂಚಾಲಿತ ಡೂಪಿಯಾನ್ ರೀಲಿಂಗ್ ಘಟಕ | ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ (ರೂ.ಲಕ್ಷಗಳಲ್ಲಿ) General 75% |
|---|---|---|
| 142 ತುದಿಗಳು | 85.00 | 63.75 |

## 7. ದ್ವಿತಳಿ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ

ಸ್ವಯಂಚಾಲಿತ ರೀಲಿಂಗ್ ಘಟಕದಿಂದ ಉತ್ಪಾದಿಸಲಾಗುವ '2ಎ' ಗ್ರೇಡ್ ಹಾಗೂ ಅದಕ್ಕೂ ಹೆಚ್ಚಿನ ಗುಣಮಟ್ಟದ ದ್ವಿತಳಿ ಕಚ್ಚಾ ರೇಷ್ಮೆಗೆ ಪ್ರತಿ ಕೆ.ಜಿ.ಗೆ ರೂ.150/–ರಂತೆ ಪ್ರೋತ್ಸಾಹಧನ ನೀಡಲಾಗುತ್ತದೆ.

ಮಲ್ಟಿಎಂಡ್ ರೀಲಿಂಗ್ ಘಟಕದಿಂದ ಉತ್ಪಾದಿಸಲಾಗುವ 'ಎ' ಗ್ರೇಡ್ ದ್ವಿತಳಿ ಕಚ್ಚಾ ರೇಷ್ಮೆಗೆ ಪ್ರತಿ ಕೆ.ಜಿ.ಗೆ ರೂ.100/–ರಂತೆ ಪ್ರೋತ್ಸಾಹಧನ ನೀಡಲಾಗುತ್ತದೆ. ಇದರಲ್ಲಿ ಕೇಂದ್ರ ಹಾಗೂ ರಾಜ್ಯದ ಪಾಲು ಶೇ.50.

| ರೀಲಿಂಗ್ ಘಟಕ ವಿವರ | ತುದಿಗಳು / ಬೇಸಿನ್‌ಗಳು | ಪ್ರತಿ ದಿನ ಉತ್ಪಾದಿಸುವ ದ್ವಿತಳಿ ಕಚ್ಚಾ ರೇಷ್ಮೆ ಪ್ರಮಾಣ (ಕೆ.ಜಿ.ಗಳಲ್ಲಿ) |
|---|---|---|
| ಸ್ವಯಂಚಾಲಿತ ರೀಲಿಂಗ್ | 400 ತುದಿಗಳು | 112 |
| | 200 ತುದಿಗಳು | 56 |
| ಮಲ್ಟಿಎಂಡ್ ರೀಲಿಂಗ್ | 6 ಬೇಸಿನ್‌ಗಳು | 9 |
| | 10 ಬೇಸಿನ್‌ಗಳು | 15 |
| | 20 ಬೇಸಿನ್‌ಗಳು | 30 |

**7. ಮಾಸ್ಟರ್ ರೀಲರ್ಸ್ / ತಂತ್ರಜ್ಞರ ಸೇವೆ ಒದಗಿಸುವುದು.**

ಅಸಂಪ್ರಾದಾಯಿಕ ಪ್ರದೇಶದಲ್ಲಿ ನುರಿತ/ಕೌಶಲ್ಯ ಕಾರ್ಮಿಕರ ಕೊರೆತೆಯಿಂದಾಗಿ ರೀಲಿಂಗ್ ಚಟುವಟಿಕೆ ಲಾಭದಾಯಕವಾಗಿ ನಡೆಸುವುದು ಕಷ್ಟವಾಗುತ್ತಿದ್ದು, ಅದರ ನಿವಾರಣೆಗೆ ಮತ್ತು ಕ್ಷೇತ್ರಮಟ್ಟದ ಬೇಡಿಕೆ ಆಧರಿಸಿ ಈ ಕಾರ್ಯಕ್ರಮವನ್ನು ರೂಪಿಸಿಸಲಾಗಿದೆ. ಘಟಕ ದರ ರೂ.1.44 ಲಕ್ಷವಿದ್ದು, ರೂ.250/– ರಂತೆ ದಿನಭತ್ಯೆ, ವಾರ್ಷಿಕ ರೂ.90,000/–, ಮನೆ ಬಾಡಿಗೆ ಭತ್ಯೆ ಮಾಹೆಯಾನ ರೂ.2000/–ರಂತೆ ವಾರ್ಷಿಕ ರೂ.24,000/– ಹಾಗೂ ವೈದ್ಯಕೀಯ ಭತ್ಯೆ ಮಾಹೆಯಾನ ರೂ.500/–, ವಾರ್ಷಿಕ ರೂ.6000/– ಒಟ್ಟಾರೆ ಸೇವಾವಧಿ (ಒಂದು ವರ್ಷ) ಪೂರೈಸಿದ ನಂತರ ಮಾಹೆಯಾನ ರೂ.2000/– ವಾರ್ಷಿಕ ರೂ.24,000/– ದಂತೆ ಅವಕಾಶ ಕಲ್ಪಿಸಿದೆ. ಅಲ್ಲದೇ 'ಡಿ' ದರ್ಜೆ ನೌಕರರಿಗೆ ದೊರೆಯುವ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ನಿಬಂಧನೆಗೆ ಒಳಪಟ್ಟು ಅರ್ಹರಿರುತ್ತಾರೆ ಹಾಗೂ ರೂ.1.00 ಲಕ್ಷ ವಿಮೆಯ ಒಂದು ವರ್ಷದ ಪ್ರೀಮಿಯಂಗೂ ಸಹ ಅರ್ಹರಿರುತ್ತಾರೆ. ಮಾಹೆಯಾನ ಒಂದು ದಿನ ರಜೆ ಸೌಲಭ್ಯ ಸಹ ಇರುತ್ತದೆ.

## ರಾಜ್ಯವಲಯದ ಕಾರ್ಯಕ್ರಮಗಳು

### 2014–15ನೇ ಸಾಲಿನಲ್ಲಿ ರೇಷ್ಮೆ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು

**1. ಸಾಂಪ್ರದಾಯಕ ಪ್ರದೇಶದ ಮಲ್ಟಿಎಂಡ್ ಘಟಕಗಳಲ್ಲಿ ಉತ್ಪಾದಿಸಿದ ಮಿಶ್ರತಳಿ ರೇಷ್ಮೆಗೆ ಪ್ರೋತ್ಸಾಹಧನ:–**

ಸಾಂಪ್ರದಾಯಿಕ ಪ್ರದೇಶದವರಿಗೆ ಪ್ರೋತ್ಸಾಹಧನವನ್ನು ಮಲ್ಟಿಎಂಡ್ ಘಟಕಗಳನ್ನು ಸ್ಥಾಪಿಸಿ ಮಿಶ್ರತಳಿ ಕಚ್ಚಾ ರೇಷ್ಮೆ ಉತ್ಪಾದನೆಗೆ ಪ್ರಾರಂಭಿಸಿದ ದಿನದಿಂದ ಐದು ವರ್ಷದ ಅವಧಿಗೆ ಒಳಪಟ್ಟು ನೀಡಲಾಗುವುದು.

ಸಹಾಯಧನ ಪುರುಷರಿಗೆ ರೂ.60–00 ಪ್ರತಿ ಕೆ.ಜಿ.ಗೆ.
ಮಹಿಳೆಯರಿಗೆ ರೂ.75–00 ಪ್ರತಿ ಕೆ.ಜಿ.ಗೆ.

**2. <u>ಹೊಸ ಪ್ರದೇಶದ ಮಲ್ಟಿಎಂಡ್/ಫಿಲೇಚರ್ ಬೇಸಿನ್/ಕಾಟೇಜ್ ಬೇಸಿನ್/ಚರಕಾ ರೇಷ್ಮೆಗೆ ಪ್ರೋತ್ಸಾಹಧನ:</u>**

ಹೊಸ ಪ್ರದೇಶದಲ್ಲಿ ನೂಲು ಬಿಚ್ಚಾಣಿಕೆ ಕಾರ್ಯಕ್ರಮಗಳನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಹೊಸ ಪ್ರದೇಶದಲ್ಲಿ ಉತ್ಪಾದಿಸುವ ರೇಷ್ಮೆಗೆ ಪ್ರೋತ್ಸಾಹಧನ ನೀಡಲಾಗುವುದು.

ಸಹಾಯಧನ :

ಮಿಶ್ರತಳಿ : ಪುರುಷರಿಗೆ ರೂ.60–00 ಪ್ರತಿ ಕೆ.ಜಿ.ಗೆ
ಮಹಿಳೆಯರಿಗೆ ರೂ.75–00 ಪ್ರತಿ ಕೆ.ಜಿ.ಗೆ.

ದ್ವಿತಳಿ : ಪುರುಷರಿಗೆ ರೂ.75–00 ಪ್ರತಿ ಕೆ.ಜಿ.ಗೆ
ಮಹಿಳೆಯರಿಗೆ ರೂ.100–00 ಪ್ರತಿ ಕೆ.ಜಿ.ಗೆ.

**<u>ಹೊಸ ಪ್ರದೇಶದ ಜಿಲ್ಲೆಗಳು:</u>–** <u>ಮಂಡ್ಯ ಜಿಲ್ಲೆ:</u> ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳನ್ನು ಹೊರತುಪಡಿಸಿ ಜಿಲ್ಲೆಯ ಎಲ್ಲಾ ಭಾಗ ಹೊಸ ಪ್ರದೇಶವಾಗಿರುತ್ತದೆ.

ಮೈಸೂರು ಜಿಲ್ಲೆ:- ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ಮತ್ತು ಕೆ.ಆರ್.ನಗರ ತಾಲ್ಲೂಕುಗಳು ಹೊಸ ಪ್ರದೇಶಗಳಾಗಿರುತ್ತವೆ. ತುಮಕೂರು, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಬಳ್ಳಾರಿ, ಧಾರವಾಡ, ರಾಯಚೂರು, ಬಿಜಾಪುರ, ಬೆಳಗಾಂ, ಗುಲ್ಬರ್ಗಾ, ಬೀದರ್, ಯಾದಗಿರಿ, ಉಡುಪಿ, ದಾವಣಗೆರೆ, ಕೊಪ್ಪಳ, ಬಾಗಲಕೋಟೆ, ಗದಗ, ಹಾವೇರಿ ಜಿಲ್ಲೆಗಳು ಹೊಸ ಪ್ರದೇಶಗಳಾಗಿರುತ್ತವೆ.

## 3. ಕಾಟೇಜ್ ಬೇಸಿನ್/ಫಿಲೇಚರ್ ರೇಷ್ಮೆಗೆ ಪ್ರೋತ್ಸಾಹಧನ

ಸಾಂಪ್ರದಾಯಿಕ ಪ್ರದೇಶದ ರೀಲರುಗಳಿಗೆ **ಕಾಟೇಜ್ ಬೇಸಿನ್/ಫಿಲೇಚರ್ ಬೇಸಿನ್ ಘಟಕಗಳಿಂದ ಉತ್ಪಾದಿಸುವ ರೇಷ್ಮೆಗೆ ಪ್ರೋತ್ಸಾಹಧನ ನೀಡಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.**
ಸಹಾಯಧನ ಪುರುಷರಿಗೆ ರೂ.60-00 ಪ್ರತಿ ಕೆ.ಜಿ.ಗೆ.
ಮಹಿಳೆಯರಿಗೆ ರೂ.75-00 ಪ್ರತಿ ಕೆ.ಜಿ.ಗೆ.

## 4. ರೇಷ್ಮೆ ನೂಲು ಘಟಕಗಳಿಗೆ ಬಡ್ಡಿ ಸಹಾಯಧನ/ಒತ್ತೆ ಸಾಲ

ರಾಜ್ಯದ ರೇಷ್ಮೆ ರೀಲರುಗಳು ವಾಣಿಜ್ಯ ಸಂಸ್ಥೆಗಳಿಂದ ಪಡೆದಿರುವ ಸಾಲದ ಮೇಲಿನ ಸರಳ ಬಡ್ಡಿ ಹಿಂಬರಣೆ ಮಾಡುವುದು ಹಾಗೂ ಶೇಕಡಾ 3 ರಷ್ಟು ಬಡ್ಡಿ ದರಗಳಲ್ಲಿ ಸಾಲವನ್ನು ಒದಗಿಸುವುದು. ಮಾರುಕಟ್ಟೆಯಲ್ಲಿ ರೇಷ್ಮೆ ಧಾರಣೆಯಲ್ಲಿನ ಏರಿಳಿತಗಳಿಂದ ಭಾದಿತರಾಗುವ ರೀಲರುಗಳಿಗೆ ಅನುಕೂಲವಾಗುವಂತೆ ರೇಷ್ಮೆ ಕೈಗಾರಿಕಾ ಸಹಕಾರ ಸಂಘಗಳು ಮತ್ತು ರೇಷ್ಮೆ ವಿನಿಮಯ ಕೇಂದ್ರಗಳ ಮುಖಾಂತರ ಕಚ್ಚಾ ರೇಷ್ಮೆ ಮತ್ತು ಅದರ ಮೌಲ್ಯದ ಶೇ.70ರ ಗರಿಷ್ಟ ಒತ್ತೆ ಸಾಲ ನೀಡಿಕೆ.

## 5 ಕಾಟೇಜ್/ಫಿಲೇಚರ್ ಬೇಸಿನ್ ರೀಲಿಂಗ್ ಯಂತ್ರೋಪಕರಣಗಳ ಅಳವಡಿಕೆ:

ಸಾಂಪ್ರದಾಯಕ ಪ್ರದೇಶದ ರೀಲರುಗಳ ಬೇಡಿಕೆ ಮೇರೆಗೆ ಇಟಾಲಿಯನ್ ಮಾದರಿ ಕಾಟೇಜ್/ಫಿಲೇಚರ್ ಬೇಸಿನ್ ರೀಲಿಂಞ್ ಯಂತ್ರೋಪಕರಣಗಳ ಅಳವಡಿಕೆಗೆ ಸಹಾಯಧನ ನೀಡಲಾಗುತ್ತದೆ.

| ಕ್ರ.ಸಂ | ಯಂತ್ರೋಪಕರಣ | ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ ಶೇಕಡ | |
|---|---|---|---|---|
| | | | ಸಾಮಾನ್ಯ 60% * | ಎಸ್‌ಸಿಪಿ/ಟಿಎಸ್‌ಪಿ 90% |
| 1 | 6 ಬೇಸಿನ್‌ಗಳ ಇಟಾಲಿಯನ್ ಮಾದರಿ ಫಿಲೇಚರ್ ರೀಲಿಂಗ್ ಘಟಕಕ್ಕೆ | 1,50,000.00 | 90,000.00 | 1,35,000.00 |

- **ಶೇಕಡ ಸಹಾಯಧನ 75ಕ್ಕೆ ಹೆಚ್ಚಿಸಲು ಪ್ರಸ್ತಾಪಿಸಿದೆ. ಸರ್ಕಾರದ ಪರಿಶೀಲನೆಯಲ್ಲಿದೆ**

**6 ಬಾಯ್ಲರ್ ಅಳವಡಿಕೆ:–**

ಇತ್ತೀಚಿನ ವರ್ಷಗಳಲ್ಲಿ ಗುಣಮಟ್ಟದ ರೇಷ್ಮೆ ಉತ್ಪಾದನೆಗೆ ಪ್ರಾಮುಖ್ಯತೆ ದೊರಕುತ್ತಿದೆ. ಈ ದಿಸೆಯಲ್ಲಿ ಚರಕಗಳ ಬದಲಿಗೆ ಕಾಟೇಜ್ / ಫಿಲೇಚರ್ ಬೇಸಿನ್ ಹಾಗೂ ಮಲ್ಟಿ ಎಂಡ್ ರೀಲಿಂಗ್ ಘಟಕಗಳಿಗೆ ನೀರು ಮೆದುಗೊಳಿಸುವ ಯಂತ್ರದೊಂದಿಗೆ ಬಾಯ್ಲರ್ ಅಳವಡಿಕೆ ಅವಶ್ಯಕವಾಗಿರುತ್ತದೆ.

| ಘಟಕ ದರ | | ಸಹಾಯಧನ | |
|---|---|---|---|
| | | ಸಾಮಾನ್ಯ (50%) | ಎಸ್‌ಸಿಪಿ/ಟಿಎಸ್‌ಪಿ (90%) |
| ಗಂಟೆಗೆ 100 ಕೆ.ಜಿ. ಹಬೆ ಒದಗಿಸುವ ಸಾಮರ್ಥ್ಯ | ರೂ.1,35,000.00 | ರೂ.67,500.00 | ರೂ.1,21,500.00 |
| ಗಂಟೆಗೆ 50 ಕೆ.ಜಿ. ಹಬೆ ಒದಗಿಸುವ ಸಾಮರ್ಥ್ಯ | ರೂ. 90,000.00 | ರೂ.45,000.00 | ರೂ.81,000–00 |

- ಶೇಕಡ ಸಹಾಯಧನ 75ಕ್ಕೆ ಹೆಚ್ಚಿಸಲು ಪ್ರಸ್ತಾಪಿಸಿದೆ. ಸರ್ಕಾರದ ಪರಿಶೀಲನೆಯಲ್ಲಿದೆ

**7 ಜನರೇಟರ್ ಅಳವಡಿಕೆ:–**

ಗ್ರಾಮೀಣ ಪ್ರದೇಶದಲ್ಲಿ ನೂಲು ಬಿಚ್ಚುವ ಉದ್ಯಮವು ಹೆಚ್ಚಾಗಿದ್ದು, ವಿದ್ಯುತ್ ವ್ಯತ್ಯಯದಿಂದಾಗಿ ಉಂಟಾಗುವ ಅಡಚಣೆಯನ್ನು ನೀಗಲು ಜನರೇಟರ್ ಅಳವಡಿಕೆಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಶಬ್ಧಮಾಲಿನ್ಯವನ್ನು ತಡೆಯಲು ಶಬ್ಧರಹಿತ ಜನರೇಟರ್ (silent generator)ಅಳವಡಿಕೆಗೆ ಅವಕಾಶ ಕಲ್ಪಿಸುವುದು.

| ಘಟಕ ದರ | ಸಹಾಯಧನ | |
|---|---|---|
| | ಸಾಮಾನ್ಯ (50%) | ಎಸ್‌ಸಿಪಿ/ಟಿಎಸ್‌ಪಿ (90%) |
| ರೂ.65,000–00 | ರೂ.32,500–00 | ರೂ.58,500–00 |

- ಶೇಕಡ ಸಹಾಯಧನ 75ಕ್ಕೆ ಹೆಚ್ಚಿಸಲು ಪ್ರಸ್ತಾಪಿಸಿದೆ. ಸರ್ಕಾರದ ಪರಿಶೀಲನೆಯಲ್ಲಿದೆ

**8 ಸೌರ ಶಕ್ತಿ ಅಳವಡಿಕೆ:–**

ನೂಲು ಬಿಚ್ಚಾಣಿಕೆಯಲ್ಲಿ ಸೌರಶಕ್ತಿ ಅಳವಡಿಕೆಯಿಂದ ಇಚಿಧನದ ಉಳಿತಾಯವಾಗುತ್ತದೆ ಹಾಗೂ ಕಚ್ಚಾ ರೇಷ್ಮೆ ಉತ್ಪಾದನಾ ವೆಚ್ಚ ತಗ್ಗಿಸುವಲ್ಲಿ ಸಹಕಾರಿಯಾಗುತ್ತದೆ. ಸೌರಶಕ್ತಿ ಬಳಕೆಯಿಚಿದ ಯಾವುದೇ ಪರಿಸರ ಮಾಲಿನ್ಯ ಉಂಟಾಗುವುದಿಲ್ಲ.

| ಕ್ರ. | ವಿವರ | ಘಟಕ ದರ | ಸಹಾಚಿುಧನ | |
|---|---|---|---|---|
| | | | ಸಾಮಾನ್ಯ (50%) | ಎಸ್‌ಸಿಪಿ/ಟಿಎಸ್‌ಪಿ (90%) |
| 1. | 8 ಗಂಟೆ ಅವಧಿಯಲ್ಲಿ 1000 ಲೀ. ಬಿಸಿ ನೀರು ಒದಗಿಸುವ ಸಾಮರ್ಥ್ಯ | 1,50,000.00 | 75,000.00 | 1,35,000.00 |
| 2. | 8 ಗಂಟೆ ಅವಧಿಯಲ್ಲಿ 500 ಲೀ. ಬಿಸಿ ನೀರು ಒದಗಿಸುವ ಸಾಮರ್ಥ್ಯ | 75,000.00 | 37,500.00 | 67,500.00 |
| 3. | 8 ಗಂಟೆ ಅವಧಿಯಲ್ಲಿ 200 ಲೀ. ಬಿಸಿ ನೀರು ಒದಗಿಸುವ ಸಾಮರ್ಥ್ಯ | 50,000.00 | 25,000.00 | 45,000.00 |

- ಶೇಕಡ ಸಹಾಯಧನ 75ಕ್ಕೆ ಹೆಚ್ಚಿಸಲು ಪ್ರಸ್ತಾಪಿಸಿದೆ. ಸರ್ಕಾರದ ಪರಿಶೀಲನೆಯಲ್ಲಿದೆ

**9. ರೀಲಿಂಗ್ ಶೆಡ್‌ಗೆ ಸೌರಶಕ್ತಿ ದೀಪ ಅಳವಡಿಕೆಗೆ ಸಹಾಯಧನ.**

ಗ್ರಾಮೀಣ ಪ್ರದೇಶದಲ್ಲಿ ನೂಲು ಬಿಚ್ಚುವ ಉದ್ಯಮವು ಹೆಚ್ಚಾಗಿದ್ದು, ವಿದ್ಯುತ್ ವ್ಯತ್ಯಯದಿಂದಾಗಿ ಉಂಟಾಗುವ ಅಡಚಣೆಯನ್ನು ನೀಗಲು ಸೌರಶಕ್ತಿ ದೀಪದ ಅಳವಡಿಕೆಗೆ ಅವಕಾಶ ಕಲ್ಪಿಸಲಾಗಿದೆ.

| ಘಟಕ ದರ | ಸಹಾಯಧನ | |
|---|---|---|
| | ಸಾಮಾನ್ಯ (50%) | ಎಸ್‌ಸಿಪಿ/ಟಿಎಸ್‌ಪಿ (90%) |
| ರೂ.20,000.00 | ರೂ.10,000.00 | ರೂ.18,000.00 |

**10 ರೀಲಿಂಗ್ ಶೆಡ್ ನಿರ್ಮಾಣ:**

ರೇಷ್ಮೆ ನೂಲು ಬಿಚ್ಚಾಣಿಕೆಯು ಅನೇಕ ಸಂಸ್ಕರಣಗಳನ್ನು ಒಳಗೊಂಡಿದ್ದು, ಗೂಡುಗಳಿಂದ ಗುಣಮಟ್ಟದ ರೇಷ್ಮೆ ನೂಲನ್ನು ಬಿಚ್ಚುವುದು ಇದರ ಮುಖ್ಯ ಉದ್ದೇಶವಾಗಿದೆ. ಕಾಟೇಜ್ ಬೇಸಿನ್, ಫಿಲೇಚರ್ ಬೇಸಿನ್, ಮಲ್ಟಿಎಂಡ್ ಯಂತ್ರಗಳ ಸಹಾಯದಿಂದ ರೇಷ್ಮೆ ನೂಲು ಬಿಚ್ಚಾಣಿಕೆ ಮಾಡಲಾಗುತ್ತಿದೆ. ಉತ್ತಮ ಗುಣಮಟ್ಟದ ರೇಷ್ಮೆ ನೂಲು ಉತ್ಪಾದನೆ ಮಾಡಲು ಮತ್ತು ಉಪಯೋಗಿಸುವ ಯಂತ್ರೋಪಕರಣಗಳ ಸಂರಕ್ಷಣೆಗಾಗಿ ಹಾಗೂ ಸ್ವಚ್ಚತೆ ಕಾಪಾಡಲು ರೀಲಿಂಗ್ ಶೆಡ್ ನಿರ್ಮಾಣ ಮಾಡುವುದು ಅವಶ್ಯಕವಾಗಿದೆ. ರೀಲಿಂಗ್ ಶೆಡ್ ನಿರ್ಮಿಸುವ ರೀಲರುಗಳಿಗೆ ಇಲಾಖಾವತಿಯಿಂದ ಸಹಾಯಧನ ನೀಡಲಾಗುತ್ತಿದೆ.

| ಕ್ರಮ ಸಂಖ್ಯೆ | ವಿಸ್ತೀರ್ಣ / ವಿವರ | ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ (ರೂ.ಲಕ್ಷಗಳಲ್ಲಿ) | |
|---|---|---|---|---|
| | | | ಸಾಮಾನ್ಯ(50%) | ಎಸ್‌ಸಿಪಿ/ಟಿಎಸ್‌ಪಿ(90%) |
| 1. | 600 ಚ.ಅಡಿ | 3,60,000 | 1,80,000 | 3,24,000 |

**11 ಕಾಟೇಜ್ ಬೇಸಿನ್ ಪುನಶ್ಚೇತನ**

ರೇಷ್ಮೆ ನೂಲು ಬಿಚ್ಚಾಣಿಕೆದಾರರು ಹಿಂದಿನ ಸಾಲುಗಳಲ್ಲಿ ಅಳವಡಿಸಿರುವ ಕಾಟೇಜ್ ಬೇಸಿನ್ ತುಂಬಾ ಹಳೆಯದಾಗಿದ್ದಲ್ಲಿ ಇಂತಹ ಘಟಕಗಳಿಂದ ಪೂರ್ಣ ಪ್ರಮಾಣದಲ್ಲಿ ರೇಷ್ಮೆ ಉತ್ಪಾದಿಸಿಲು ಸಾಧ್ಯವಾಗುವುದಿಲ್ಲ ಅದುದರಿಂದ ಇಂತಹ ಘಟಕಗಳಿಗೆ ಅಗತ್ಯ ಬಿಡಿಭಾಗಗಳನ್ನು ಅಳವಡಿಸಿ ಪುನಶ್ಚೇತನಗೊಳಿಸಲು ಸೌಲಭ್ಯ ಒದಗಿಸಲಾಗುವುದು.

| ಕಾಟೇಜ್ ಬೇಸಿನ್ ಪುನಶ್ಚೇತನ | ಘಟಕ ದರ (ರೂ.ಲಕ್ಷಗಳಲ್ಲಿ) | ಸಹಾಯಧನ (ರೂ.ಲಕ್ಷಗಳಲ್ಲಿ) | |
|---|---|---|---|
| | | General 50% | SCSP/TSP 90% |
| | 0.25 | 0.125 | 0.225 |

**2014–15ನೇ ಸಾಲಿಗೆ ಹೊಸ ಕಾರ್ಯಕ್ರಮವಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ**

**<u>12 ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ರೀಲರುಗಳು ಉತ್ಪಾದಿಸಿದ ಮಲ್ಟಿ ಎಂಡ್ /ಫಿಲೇಚರ್/ಕಾಟೇಜ್ ಬೇಸಿನ್/ಚರಕ ರೇಷ್ಮೆಗೆ ಪ್ರೋತ್ಸಾಹಧನ:</u>**

ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಮಲ್ಟಿ ಎಂಡ್/ಫಿಲೇಚರ್/ಕಾಟೇಜ್/ಚರಕಾ ಯಂತ್ರಗಳ ಸಹಾಯದಿಂದ ಉತ್ಪಾದಿಸುವ ಪ್ರತಿ ಕೆ.ಜಿ. ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ ನೀಡಲಾಗುವುದು.

**ಮಿಶ್ರತಳಿ :**
- ಪುರುಷರಿಗೆ ಪ್ರತಿ ಕೆ.ಜಿಗೆ ರೂ.75/–
- ಮಹಿಳೆಯರಿಗೆ ಪ್ರತಿ ಕೆ.ಜಿಗೆ ರೂ.100/–

**ದ್ವಿತಳಿ :**
- ಪುರುಷರಿಗೆ ಪ್ರತಿ ಕೆ.ಜಿಗೆ ರೂ.125/–
- ಮಹಿಳೆಯರಿಗೆ ಪ್ರತಿ ಕೆ.ಜಿಗೆ ರೂ.150/–

# ರಾಜ್ಯವಲಯದ ಇತರೆ ಕಾರ್ಯಕ್ರಮಗಳು

| | | |
|---|---|---|
| **ಮೈಸೂರು ಬಿತ್ತನೆ ಗೂಡಿಗೆ ಬೋನಸ್** | ಪ್ರತಿ ಕೆಜಿಗೆ ರೂ.150/-ರಂತೆ | ಬಿತ್ತನೆಗೂಡು ಬಿತ್ತನೆಗೆ ಯೋಗ್ಯವಿದ್ದು ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದಲ್ಲಿ |
| **ದ್ವಿತಳಿ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ** | ಪ್ರತಿ ಕೆಜಿಗೆ ರೂ.150/-ರಂತೆ | ಬಿತ್ತನೆಗೂಡು ಬಿತ್ತನೆಗೆ ಯೋಗ್ಯವಿದ್ದು ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದಲ್ಲಿ |
| **ಉತ್ಪಾದನೆ ಹಾಗೂ ಗುಣಮಟ್ಟದ ಆಧಾರದ ಮೇಲೆ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ** | ಪ್ರತಿ ಕೆಜಿಗೆ ರೂ.20/-ರಂತೆ | • ಮೈಸೂರು ಬಿತ್ತನೆಗೂಡು - 100 ಮೊಟ್ಟೆಗೆ ಸರಾಸರಿ ಇಳುವರಿ 35 ಕೆಜಿ ಮೇಲ್ಪಟ್ಟು ಸಂಖ್ಯೆಯಲ್ಲಿ 900 ಗೂಡುಗಿಂತ ಕಡಿಮೆಯಿದ್ದಾಗ.<br>• ದ್ವಿತಳಿ ಬಿತ್ತನೆಗೂಡು- 100 ಮೊಟ್ಟೆಗೆ ಸರಾಸರಿ ಇಳುವರಿ 50 ಕೆಜಿ ಮೇಲ್ಪಟ್ಟು ಸಂಖ್ಯೆಯಲ್ಲಿ 700 ಗೂಡುಗಿಂತ ಕಡಿಮೆಯಿದ್ದಾಗ |
| **ರೇಷ್ಮೆ ಗೂಡಿಗೆ ಉತ್ಪಾದಕತೆ ಮತ್ತು ಗುಣಮಟ್ಟದ ಆಧಾರ ಮೇಲೆ ಪ್ರೋತ್ಸಾಹಧನ** | ▪ ಪ್ರತಿ ಕೆಜಿ ಮಿಶ್ರತಳಿಗೆ ರೂ.10/- ದ್ವಿತಳಿಗೆ ರೂ.40/-ರಂತೆ,<br>▪ 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರೇಷ್ಮೆ ಗೂಡಿಗೆ ಹಾಲಿ ಇರುವ ಪ್ರೋತ್ಸಾಹಧನವನ್ನು ಪ್ರತಿ ಕೆಜಿ ಮಿಶ್ರತಳಿಗೆ ರೂ.10/- ರಿಂದ ರೂ.30/-ಕ್ಕೆ ಮತ್ತು ದ್ವಿತಳಿ ಗೂಡಿಗೆ ರೂ.40/- ರಿಂದ ರೂ.50/-ಕ್ಕೆ ಹೆಚ್ಚಿಸಲು ಪ್ರಸ್ತಾಪಿಸಿದೆ. | 100 ಮೊಟ್ಟೆಗೆ ಸರಾಸರಿ ಇಳುವರಿ 60 ಕೆಜಿ ಮೇಲ್ಪಟ್ಟು ಇದ್ದಾಗ. |
| **ಹೊಸ ಪ್ರದೇಶದ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ವಹಿವಾಟಾಗುವ ಗೂಡಿಗೆ ಪ್ರೋತ್ಸಾಹಧನ** | ▪ ಪ್ರತಿ ಕೆಜಿಗೆ ಪುರುಷರಿಗೆ ರೂ.10/- ಹಾಗೂ ಮಹಿಳೆಯರಿಗೆ ರೂ.20/- ರಂತೆ.<br>▪ ಪ್ರತಿ ಕೆಜಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಂಡದ ವರ್ಗದ ಪುರುಷರಿಗೆ ರೂ.20/- ಹಾಗೂ ಮಹಿಳೆಯರಿಗೆ ರೂ.30/-ರಂತೆ | ಬೀದರ್, ಗುಲ್ಬರ್ಗಾ, ಕೊಪ್ಪಳ, ಯಾದಗಿರಿ, ರಾಯಚೂರು, ಬಾಗಲಕೋಟೆ, ಬೆಳಗಾಂ, ಬಿಜಾಪುರ, ಧಾರವಾಡ, ಗದಗ ಹಾವೇರಿ, ಉತ್ತರ ಕನ್ನಡ, ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಯ ರೇಷ್ಮೆ ಬೆಳೆಗಾರರು. |
| **ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಉತ್ಪಾದಿಸಿದ ದ್ವಿತಳಿ ಗೂಡಿಗೆ ಸಾಗಾಣಿಕೆ ವೆಚ್ಚ** | ಪ್ರತಿ ಕೆಜಿಗೆ ರೂ.10/-ರಂತೆ | ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಉತ್ಪಾದಿಸಿದ ದ್ವಿತಳಿ ಗೂಡುಗಳನ್ನು ರೇಷ್ಮೆ ಗೂಡು ಮಾರುಕಟ್ಟೆ ಮಾರಾಟ ಮಾಡಿದಾಗ ಪ್ರೋತ್ಸಾಹಧನ ನೀಡಲಾಗುವುದು. |